ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಾರೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ರಾಜವರ್ಧನ್.—ಅಧ್ಯಕ್ಷರೇ...

ಶ್ರೀ ಎಸ್.ಆರ್. ಬೊಮ್ಮಾಯಿ.—ಜಿ.ವಿ.ಕೆ.ರಾವ್‌ರವರು ವಿಚಾರಣೆ ನಡೆಸಿದ ಎರಡು ರಿಪೋರ್ಟ್‌ಗಳು ಇವೆ. ಆ ರಿಪೋರ್ಟ್‌ಗಳ ಬಗ್ಗೆ ಚರ್ಚೆಯಾಗುವ ಬಗ್ಗೆ ತಾವು ಹೇಳಿದ್ದೀರಿ. ನಾನೂ ಕೂಡ ಚರ್ಚೆಯಾಗಲಿ ಎಂದು ಹೇಳಿದ್ದೇನೆ. ಸಾಧ್ಯವಾದರೆ ಇವತ್ತು ರಾತ್ರಿ ಎಲ್ಲ ಸದಸ್ಯರಿಗೂ ವರದಿಯ ಪ್ರತಿಯನ್ನು ಡಿಸ್ಟ್ರಿಬ್ಯೂಷನ್ ಮಾಡಿಸುತ್ತೇನೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಂಟೀರಿಯಮ್ ವರದಿ ಮತ್ತು ಅಂತಿಮ ವರದಿಯನ್ನು ಕೊಡುತ್ತೇವೆಂದು ಹೇಳಿದ್ದೀರಿ, ಈ ೧೨೮ ಸೊಸೈಟಿಗಳ ಪೈಕಿ ೯೮ ಸೊಸೈಟಿ ಬಗ್ಗೆ ಮಾತ್ರ ಎನ್‌ಕ್ವೈರಿಯಾಗಿದೆ. ಇನ್ನು ಕೆಲವು ಸೊಸೈಟಿಗಳ ಬಗ್ಗೆ ಎನ್‌ಕ್ವೈರಿ ಮಾಡಲು ಸಿಐಡಿಗೆ ರೆಫರ್ ಮಾಡಿದ್ದಾರೆ. ಆಗ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಅಲ್ಲಿಗೇ ಸ್ಟಾಪ್ ಮಾಡಿಸಿದರು ಎಂದು ನನಗೆ ತಿಳಿದು ಬಂದಿದೆ. ಅದನ್ನು ಇಲ್ಲಿ ಇಟ್ಟರೆ ಗೊತ್ತಾಗುತ್ತದೆ. ಆ ೫ ಸೊಸೈಟಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ನಿರ್ಣಯವನ್ನು ತೆಗೆದುಕೊಂಡಿದ್ದಾರೆ ಎಂಬುದೂ ಕೂಡ ಹೊರಗೆ ಬರುತ್ತದೆ. ಸಿ.ಓ.ಡಿ. ವರದಿಯನ್ನು ಇಲ್ಲಿ ಇಟ್ಟರೆ ಚರ್ಚೆಗೆ ಸಂಪೂರ್ಣವಾದ ಅವಕಾಶವಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ. ಸಿ.ಓ.ಡಿ. ವರದಿಯನ್ನು ತಡೆ ಹಿಡಿದಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ಐದು ಸೊಸೈಟಿಗಳ ಬಗ್ಗೆ ಕೂಡ ಈ ವರದಿಯಲ್ಲೇ ಇದೆ. ಇಂಟೀರಿಯಮ್ ವರದಿ ಮತ್ತು ಅಂತಿಮ ವರದಿಯನ್ನು ಸಭೆಯಲ್ಲಿ ಇಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ವೈಯಾಲಿ ಕಾವಲ್ ಸೊಸೈಟಿ ಬಗ್ಗೆ ಸಿ.ಓ.ಡಿ. ವರದಿ ಇದೆ

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ತಾವು ವರದಿಗಳನ್ನು ಕೊಡುತ್ತೀರಿ, ಸಂತೋಷ, ಅದಕ್ಕೆ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಇವತ್ತು ರಾತ್ರಿ ಕಳುಹಿಸಿಕೊಡುತ್ತೇನೆಂದು ಹೇಳಿದ್ದೀರಿ, ನಾವು ಬೆಳಿಗ್ಗೆ ಅದನ್ನು ಓದಿಕೊಂಡು ರೆಡಿಯಾಗಿ ಬರುತ್ತೇವೆ. ನಾಳೆ ಈ ವಿಚಾರದ ಬಗ್ಗೆ ಚರ್ಚೆ ಮಾಡಲು ನಿಯಮ ೬೯ರಲ್ಲಿ ಏನು ಅವಕಾಶ ಮಾಡಿಕೊಟ್ಟಿದ್ದೀರಿ ಅದನ್ನು ನಾಳೆ ಮೊಟ್ಟ ಮೊದಲು ವಿಷಯವನ್ನಾಗಿ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಈಗ ಎಂ.ಡಿ. ಸೀಟಿನ ಬಗ್ಗೆ ತೆಗೆದುಕೊಳ್ಳೋಣ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದನ್ನು ಬೇಕಾದರೆ ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ತಾವು ಅಜೆಂಡಾ ನೋಡಿದರೆ ಗೊತ್ತಾಗುತ್ತದೆ,

ಶ್ರೀ ಎಸ್.ಆರ್. ಬೊಮ್ಮಾಯಿ.—ಅಜೆಂಡಾದಲ್ಲಿ ಹಾಕಿದ್ದಾರೆ. ಆದರೆ ಅದು ನನಗೆ ಸರಿ ಎಂದು ಕಾಣುವುದಿಲ್ಲ. ಬೇರೆ ಬೇರೆ ಬಿಲ್‌ಗಳು ಇವೆ. ಪ್ರಶ್ನೋತ್ತರವಾದ ನಂತರ ಇದನ್ನು ತೆಗೆದುಕೊಳ್ಳೋಣ.

ಶಾಸನ ರಚನಾ ಕಾರ್ಯಕಲಾಪಗಳು

(೧೯೮೯ನೇ ಇಸವಿಯ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ಪ್ರತಿಬಂಧ ತಿದ್ದುಪಡಿ) ವಿಧೇಯಕ

ಪ್ರೊ॥ ಎ. ಲಕ್ಷ್ಮೀಸಾಗರ್.—ಶಾಸನ ರಚನೆಯಾದ ಮೇಲೆ ಮಿಕ್ಕಿದ್ದನ್ನು ತೆಗೆದುಕೊಳ್ಳೋಣ. ಇದೊಂದನ್ನು ಪಾಸ್ ಮಾಡಿಕೊಡಿ. ೧೯೮೯ನೇ ಇಸವಿ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ಪ್ರತಿಬಂಧ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ವಿನಂತಿಸುತ್ತೇನೆ. ಇದರಲ್ಲಿ ವಿಶೇಷವಾದುದ್ದು ಏನೂ ಇಲ್ಲ. ಶಾಸಕರಿಗೆ ಇರತಕ್ಕಂತಹ ರಕ್ಷಣೆಯನ್ನು ಮಂಡಲ ಪ್ರಧಾನರಿಗೆ ಜಿಲ್ಲಾಪರಿಷತ್ತಿನ ಅಧ್ಯಕ್ಷರಿಗೆ ನೀಡಬೇಕು ಅವರಿಗೂ ಕೂಡ ಈ ವಿನಾಯ್ತಿ ಸಿಗಬೇಕೆಂಬ ಬಗ್ಗೆ ಮತ್ತು

ಕೆಲವು ಕಡೆಗಳಲ್ಲಿ ಇದರ ಬಗ್ಗೆ ಏನು ಸಂಶಯ ಬಂದಿದೆ ಅದನ್ನು ನಿವಾರಣೆ ಮಾಡಿ ಶಾಸಕರಿಗೆ ಇರತಕ್ಕಂತಹ ರಕ್ಷಣೆಯನ್ನು ಇವರಿಗೂ ಕೊಡಬೇಕೆಂದು ಇದರಲ್ಲಿ ಇದೆ. ಮಾನ್ಯ ಸಭೆ ಇದಕ್ಕೆ ಒಪ್ಪಿಗೆ ನೀಡಬೇಕೆಂದು ವಿನಂತಿ.

†ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸಭಾಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯನ್ನು ತಂದಿರುವ ಉದ್ದೇಶ ಏನು ಅಂದರೆ, ಅವರಿಗೆ ಸ್ಯಾಲರಿ ಕೊಟ್ಟರೂ ಕೂಡ ಮಂಡಲ್ ಪಂಚಾಯತ್ ಪ್ರಧಾನರು, ಜಿಲ್ಲಾ ಪರಿಷತ್ ಅಧ್ಯಕ್ಷರೂ ಡಿಸ್‌ಕ್ವಾಲಿಫಿಕೇಷನ್ ಆಗಬಾರದು ಎನ್ನತಕ್ಕ ದೃಷ್ಟಿಯಿಂದ ಇದನ್ನು ತಂದಿದ್ದಾರೆ. ಮತ್ತು ಕೆಲವು ಕಡೆ ಸ್ಯಾಲರಿ ಕೊಟ್ಟರೂ ಕೂಡ ಡಿಸ್‌ಕ್ವಾಲಿಫಿಕೇಷನ್ ಆಗುತ್ತದೆ ಎಂಬ ಸಂಶಯ ಇವೆ. ಆ ಸಂಶಯವನ್ನು ನಿವಾರಣೆ ಮಾಡುವುದಕ್ಕೋಸ್ಕರವಾಗಿ ಇದನ್ನು ತಂದಿದ್ದೇವೆ ಎಂದು ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ ಮತ್ತು ರೀಸನ್ಸ್‌ನಲ್ಲಿ ಹೇಳಿದ್ದಾರೆ. ಆದರೆ ಇದಕ್ಕಿಂತಲೂ ನನಗೆ ಅನಿಸಿದ ಮಟ್ಟಿಗೆ ನಾವು ಆಗ ಪ್ರಾರಂಭದಲ್ಲಿ ಶ್ರೀಮಾನ್ ನಜೀರ್‌ಸಾಬ್‌ರವರು ಈ ಮಸೂದೆ ತಂದಾಗ ನಾಲ್ಕು ಅಮೆಂಡ್‌ಮೆಂಟ್‌ಗಳನ್ನು ಕೊಟ್ಟಿದ್ದೇವೆ. ಅದರಲ್ಲಿ ಇದು ಇತ್ತು, ಎಂ.ಎಲ್.ಎ.ಗಳಿಗೆ ಸ್ಥಾನಮಾನವನ್ನು ಕೊಟ್ಟು ಡಿಸ್‌ಕ್ವಾಲಿಫೈ ಆಗತಕ್ಕ ರೀತಿಯಲ್ಲಿ ಇದು ಆಗಬಾರದು, ಇದನ್ನು ಪುನರ್ ಪರಿಶೀಲನೆ ಮಾಡಿ ಎಂದು ಹೇಳಿದಾಗ, ಅವರು ಏನು ಮಾಡಿದರು ? ಅವರು ಹಟ ಹಿಡಿದು ಕೊನೆಗೆ ತಾಲ್ಲೂಕ್ ಪಂಚಾಯ್ತಿ ಚೇರ್ಮನ್ ಆಗಿ ನಾವು ಕೆಲಸ ಮಾಡಿ; ಯಾವ ರೀತಿ ಅಡ್ವೈಸರಿ ಬಾಡಿ ರೀತಿ ಡಿಸ್ಟ್ರಿಕ್ಟ್ ಡೆವೆಲಪ್‌ಮೆಂಟ್ ಕೌನ್ಸಿಲ್ ಇತ್ತು. ಆ ರೀತಿಯಾಗಿ ಒಂದು ಹಲ್ಲು ಇಲ್ಲದ ಕಮಿಟಿ ಮಾಡಿ ಅಲ್ಲಿ ಕೂರಿಸಿದರು. ಇವೊತ್ತು ಯಾವ ಉದ್ದೇಶಕ್ಕಾಗಿ ಇದನ್ನು ರಿನ್ಯೂ ಮಾಡಬೇಕಾಗಿದೆ ಎಂದರೆ ಇವರಿಗೆ ಈಗ ಇರತಕ್ಕವರು ೧೧೧ ಜನ ಶಾಸಕರು, ಇದರಲ್ಲಿ ಅನೇಕ ಎಂ.ಎಲ್.ಎ. ಗಳನ್ನು ಜಿಲ್ಲಾ ಪರಿಷತ್ ಅಧ್ಯಕ್ಷರಾಗಿ ಕಳಿಸಬೇಕು ಎಂಬ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಎಲ್ಲರನ್ನೂ ಮಂತ್ರಿಗಳನ್ನಾಗಿ ಮಾಡುವುದಕ್ಕಾಗುವುದಿಲ್ಲ. ಇನ್ನು ೧೦ ತಿಂಗಳು ಅಧಿಕಾರದಲ್ಲಿ ಉಳಿಯಬೇಕಾದರೆ ಇವರು ಏನು ಮಾಡಬೇಕು ? ಯಾರು ಡಿಸ್‌ಸ್ಯಾಟಿಸ್‌ಫೈ ಎಂ.ಎಲ್.ಎ.ಗಳು ಇದ್ದಾರೆ, ಶಾಸಕರು ಇದ್ದಾರೆ ಅವರನ್ನು ಪುನಃ ಜಿಲ್ಲಾ ಪರಿಷತ್ ಅಧ್ಯಕ್ಷರನ್ನಾಗಿ ಮಾಡಿ ಕ್ಯಾಬಿನೆಟ್ ದರ್ಜೆಯ ಸೌಲಭ್ಯವನ್ನು ಕೊಟ್ಟರೆ ನಮ್ಮ ಜೊತೆಯಲ್ಲಿ ಇರುತ್ತಾರೆ ಎಂಬ ಉದ್ದೇಶದಿಂದ ಈ ಕಾನೂನನ್ನು ತಂದಿದ್ದಾರೆಯೇ ಹೊರತು ರಿಯಲ್ ಆಗಿ ಡಿಸ್‌ಕ್ವಾಲಿಫೈ ಆಗುತ್ತದೆ, ಅವರಿಗೆ ಸಹಾಯ ಮಾಡುವುದಕ್ಕಾಗಿ ತಂದಿಲ್ಲ. ಅವರಿಗೆ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ತಂದಿಲ್ಲ ಎನ್ನುವುದು ಸ್ಪಷ್ಟ. ಇದಕ್ಕೆ ನಾನು ಹೇಳುವುದು ಇದನ್ನು ತರಬೇಕಾದರೆ ಸಮಗ್ರವಾದಂತಹ ತಿದ್ದುಪಡಿಯನ್ನು ನೀವು ತರಬೇಕಾಗುತ್ತದೆ. ನಾನು ಎರಡು ಸಲ ಈ ವಿಷಯವನ್ನು ಪ್ರಸ್ತಾಪಿಸಿದ್ದೇನೆ. ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಬಗ್ಗೆ, ಡಿಸ್ಟಿಂಕ್ಷನ್ ಇಲ್ಲ. ಎಸ್.ಟಿ. ಯವರು ಎಸ್.ಸಿ. ಸೀಟ್ ಮೇಲೆ ಕಾಂಟೆಸ್ಟ್ ಮಾಡಬಹುದು. ಇದಕ್ಕೆ ಇದನ್ನು ಆರ್ಡಿನೆನ್ಸ್ ಆದರೂ ತಂದು ನೀವು ಇದನ್ನು ತಿದ್ದುಪಡಿ ಮಾಡಬೇಕು ಎಂದು ನಾನು ಕೇಳಿದಾಗ ಬಿಲ್ ತರುತ್ತೇವೆಂದು ಹೇಳಿದರು. ಕೊನೆಗೆ ನಾನು ಪ್ರೈವೇಟ್ ಮೆಂಬರ್ಸ್ ರೆಸಲ್ಯೂಷನ್ ಬಿಲ್ ಮೂವ್ ಮಾಡಬೇಕಾಯಿತು. ಅದು ಸದನದ ಮುಂದೆ ನಾಳೆ ಬರುತ್ತದೆ. ಅಂತಹ ಅರ್ಜೆಂಟ್ ಮ್ಯಾಟರನ್ನು ಇವರು ಸದನದ ಮುಂದೆ ತರಲಿಲ್ಲ. ಆದರೆ ಇದನ್ನು ತರಬೇಕಾದರೆ ಏನು ಉದ್ದೇಶ ಇದೆ ? ಅದೇ ರೀತಿಯಾಗಿ ಪ್ರತಿಯೊಂದು ಮಂಡಲ್ ಪಂಚಾಯತ್‌ನಲ್ಲಿ ೧೫ ಸಾವಿರ ರೂಪಾಯಿಗಿಂತ ಹೆಚ್ಚಿನ ಹಣ ಖರ್ಚು ಮಾಡುವುದಕ್ಕೆ ಅವರಿಗೆ ಅಧಿಕಾರ ಇಲ್ಲ. ನೀವು ಹೆಚ್ಚಿನ ಹಣಕಾಸಿನ ವ್ಯವಸ್ಥೆ ಮಾಡಿ ಕೊಡಿ ಎಂದು ಕೇಳಿದಾಗ ಅದಕ್ಕೆ ಬಿಲ್ ತರುತ್ತೇವೆಂದು ಹೇಳುತ್ತೀರಿ. ಇಂತಹ ಅನೇಕ ಮಹತ್ವವಾದ ತಿದ್ದುಪಡಿ ಇದ್ದಾಗ ಲಕ್ಷಾಂತರ ಜನರಿಗೆ ಎಫೆಕ್ಟ್ ಆಗತಕ್ಕ ನಿರ್ಣಯವನ್ನು ತೆಗೆದುಕೊಳ್ಳತಕ್ಕಂಥದ್ದು ಅಧಿಕಾರ ನಿಮ್ಮ ಕೈಯಲ್ಲಿ ಇದ್ದಾಗ ಅಂಥ ತಿದ್ದುಪಡಿಗಳನ್ನು ನೀವು ತರಲಿಲ್ಲ. ಈ ತಿದ್ದುಪಡಿಯನ್ನು ಈಗ ತಂದಿರುವ ಉದ್ದೇಶ ಏನು ? ಉದ್ದೇಶ ಇಷ್ಟೆ, ಅದು ಸ್ಪಷ್ಟವಾಗಿದೆ ಎಂದು ಹೇಳಬೇಕಾಗುತ್ತದೆ. ಅದಕ್ಕಾಗಿ ಇಂತಹ ಒಂದು ಉದ್ದೇಶ ಇಟ್ಟುಕೊಂಡು ಅಧಿಕಾರವನ್ನು ನಿಮ್ಮ ಕೈಯಲ್ಲಿ ಇಟ್ಟುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಈ ಅಮೆಂಡ್‌ಮೆಂಟ್ ಅನ್ನು ಏನು ತಂದಿದ್ದೀರಿ, ಇದನ್ನು ವಾಪಸ್ ತೆಗೆದುಕೊಂಡು ಸಮಗ್ರವಾದಂತಹ ತಿದ್ದುಪಡಿಯನ್ನು ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು, ಕೃಷ್ಣಮೂರ್ತಿ ಕಮಿಟಿ ರಿಪೋರ್ಟ್ ಏನು ಇದೆ ಅದು ಬಂದ ಮೇಲೆ ಸಮಗ್ರವಾದಂತಹ ತಿದ್ದುಪಡಿಯನ್ನು ತರುತ್ತೇವೆಂದು ಹೇಳಿದ ಮೇಲೆ ಇದು ಏಕೆ ಬೇಕು ? ಇದನ್ನೂ ಇನ್ನೂ ಕೆಲವು ಕಾಲ ತಡೆಯಬಹುದಿತ್ತಲ್ಲ. ೧೦೦ ರೂಪಾಯಿ ಅಥವಾ ೫೦ ರೂಪಾಯಿನ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅವರಿಗೆ ಸಿಗದೇ ಇದ್ದರೆ ಆಕಾಶವೇನೂ ಕಳಚಿ ಬೀಳುವುದಿಲ್ಲ. ನೀವು ರಿಸರ್ವ್ ಸೀಟಿನ ಮೇಲೆ ವ್ಯತ್ಯಾಸ ಮಾಡಿ ಎರಡು ವರ್ಷದಿಂದ ಕುಳಿತಿದ್ದೀರಿ. ಹೇಳಿದರೂ ಕೇಳುವುದಿಲ್ಲ. ಇವೊತ್ತು ಅನೇಕ ಜನ ಯಾರು ಅರ್ಹರು ಇರುವುದಿಲ್ಲ. ಅವರು ಎಸ್.ಸಿ. ಸೀಟಿನ ಮೇಲೆ ಕಾಂಟೆಸ್ಟ್ ಮಾಡುತ್ತಿದ್ದಾರೆ. ಅದು ಹೇಳಿದರೂ ಇವರ ಕಿವಿಗೆ ಇವೊತ್ತು ಹೋಗುತ್ತಿಲ್ಲ. ಆದರೆ ಇವಕ್ಕೆ ಮಾತ್ರ ತಿದ್ದುಪಡಿ ತಂದಿದ್ದಾರೆ. ನಾವು ಏನು ಹೇಳಬೇಕು. ಇದಕ್ಕೆ. ದಯವಿಟ್ಟು ಇದನ್ನು ವಾಪಸ್ ತೆಗೆದುಕೊಂಡು ಒಂದು ಸಮಗ್ರವಾದ ತಿದ್ದುಪಡಿಯನ್ನು ತರಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

†ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೇ, ಈ ಒಂದು ತಿದ್ದುಪಡಿ ಇವೊತ್ತು ಕರ್ನಾಟಕ ವಿಧಾನ ಸಭೆಯಲ್ಲಿ Karnataka Legislature (prevention or disqualification) Amendment Bill, ಏನು ತಂದಿದ್ದಾರೆ, ಇದು ಜಿಲ್ಲಾ ಪರಿಷತ್: ಮಂಡಲ್ ಪಂಚಾಯತ್ ಮಸೂದೆಗೆ ಬಹಳ ಸಂಬಂಧಪಟ್ಟಿದ್ದು. It cannot be treated in isolation with the Z.P. Act. ಇವರೆಲ್ಲರ ಮೂಲಭೂತ ದೋಷ ಏನು ಅಂದರೆ ಅಧಿಕಾರ ವಿಕೇಂದ್ರೀಕರಣ ಮಾಡಬೇಕು ಎಂದು ನಾವು ಏನು ಹೊರಟಿದ್ದೇವೆ, ಅದು ಡಿಸ್‌ಕ್ವಾಲಿಫಿಕೇಷನ್ ಅನ್ನು ತೆಗೆಯುವುದರಿಂದ ಏನು ಆಗುತ್ತದೆ ಅಂದರೆ ಯಾವ ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಹೊರಟಿದ್ದೇವೆ ಅದೇ ಅಧಿಕಾರವನ್ನು ಪುನಃ ನೀವು ಎಂ.ಎಲ್.ಎ. ಗಳಿಗೆ, ಶಾಸಕರ ಕೈಗೆ ಯಾಕೆ ತೆಗೆದುಕೊಳ್ಳಬಾರದು, ತೆಗೆದುಕೊಳ್ಳುತ್ತೇವೆ ಎನ್ನುವ ಉಪಾಯ, ಸಾಧನವಾಗಿ ಈ ಶಾಸನ ಬಂದಿದೆ. ಯಾಕೆಂದರೆ ಜಿಲ್ಲಾ ಪರಿಷತ್ತಿನ ಓಟಿನ ಹಕ್ಕು ಕೊಡಬಾರದು ಎಂದು ವಾದ ಮಾಡಿದವರು ನಾವು. ಎಂ.ಪಿ. ಗಳಾಗಲೀ ಅಥವಾ ಎಂ.ಎಲ್.ಎ. ಗಳಾಗಲೀ ಅವರು ಎಕ್ಸ್ ಅಫಿಷಿಯೋ ಮೆಂಬರ್ ಆಗಿ let them assist in deliberations. ಆದರೆ ಒಂದು ಓಟಿನ ಹಕ್ಕು ಪರಿಪೂರ್ಣವಾದ ಸದಸ್ಯರಿಂದ ಕೊಟ್ಟು ಕೂಡಬೇ ಅದು ಸಾಕಷ್ಟು ಪ್ರಭಾವ ಬೀರುತ್ತದೆ ಜಿಲ್ಲಾ ಪರಿಷತ್ ಸದಸ್ಯರು ಅಲ್ಲಿ ಸರಿಯಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇದು ನನಗೆ ಅನಿಸುತ್ತದೆ. ರಾಜಕೀಯವಾಗಿ ಇವೊತ್ತು ಸದಸ್ಯರಿಗೆ ಸಹಾಯ ಮಾಡಲಿಕ್ಕೆ ತಿದ್ದುಪಡಿ ಮಾಡಿದ್ದೇ ಹೊರತು ಇದು ಸೈದ್ಧಾಂತಿಕವಾಗಿ ಮಾಡಿದ್ದು ಅಲ್ಲ. ರಾಜಕೀಯವಾಗಿ ಏನೇನೋ ಆಗುತ್ತದೆ. ಯಾರಾದರೂ ಜಿಲ್ಲಾ ಪರಿಷತ್ ಮೆಂಬರ್ಸ್ ಎಂ.ಎಲ್.ಸಿ. ಗಳು ಆಗುತ್ತಾರೆ. ಜಿಲ್ಲಾ ಪರಿಷತ್ ಅಧ್ಯಕ್ಷರ. ಉಪಾಧ್ಯಕ್ಷರ ಪೋಸ್ಟ್‌ನಲ್ಲಿ ಅವರನ್ನು ಮುಂದುವರೆಸುವುದಕ್ಕೆ ಸಹಾಯ ಮಾಡುವುದಕ್ಕಾಗಿ ಈ ಒಂದು ಶಾಸನ ಆಗಿದೆ. ಎರಡೂ ಪೋಸ್ಟ್‌ನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಇದರಿಂದ ಮುಂದೆ ಏನು ಆಗಬಹುದು. ಜಿಲ್ಲಾ ಪರಿಷತ್ ಸದಸ್ಯರಾದವರೊಬ್ಬರು ರಾಜೀನಾಮೆ ಕೊಟ್ಟು ಜಿಲ್ಲಾ ಪರಿಷತ್ ಅಧ್ಯಕ್ಷರು ಆಗಲಿಕ್ಕೆ...

ಪ್ರೊ|| ಎ. ಲಕ್ಷ್ಮೀಸಾಗರ್.— ಎಂ.ಎಲ್.ಎ. ಗಳಿಗೆ ಫೆಸಿಲಿಟೇಟ್ ಮಾಡುವುದಕ್ಕೆ ಅಲ್ಲ. ಎಂ.ಎಲ್.ಎ. ಗಳು ಅಲ್ಲದೆ ಇರುವವರಿಗೆ ಅಧಿಕಾರ ವ್ಯಾಪ್ತಿಯಲ್ಲಿ ಪ್ರಧಾನರಿಗೆ ಕೆಲವು ಎಮಾಲ್ಯುಮೆಂಟ್ಸ್ ಕೊಡುತ್ತಾ ಇದ್ದೇವೆ. emoluments may be considered as office of profit emouluments ಸರ್ಕಾರದಿಂದ ಕೊಡುತ್ತೇವೆ. ಅವರಿಗೆ ತೊಂದರೆ ಬರಬಹುದು ಎಂಬ ಸಂಶಯದ ಆಧಾರದ ಮೇಲೆ ಹೊರತು ಎಂ.ಎಲ್.ಎ. ಗಳಿಗೆ ಅನುಕೂಲ ಮಾಡತಕ್ಕ ವಿಚಾರ ಇದರಲ್ಲಿ ಇಲ್ಲ.

12-30 P. m.

SRI M. VEERAPPA MOILY.—I am not questioning the barefide of this Bill I am not questsoning your intentions, your intentions may be pure. But what is the result and effect ? Government would not have thought of this far reaching consequences. What has happend ? Many MLAs who are not ministers and who are

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ambitious to hold power may contest and will try to become the president or vice president of the Zilla parishad.

PROF A. LAKSHMI SAGAR.—If he is disuqualified what is the answer ? How are you going to save him

SRI M. VEERAPPA MOILY.—I will tell that.........

PROF A. LAKSHMI SAGAR.—Mandal Pradhan or Upa Pradan and other people who are holding certain offices they are being paid certain emoluments and it is likely, I am not saying definite; It gives room for an argument or arguable point that these amounts can be considered as matters coming under office of profit. It is only to prevent such a situation a rising and there by causiag disqualfication to those members, we are bringing this bill. As the members of legislature how are we protected ? There is an Act. We receive emoluments, salary and other perks. They are all paid by the Government. Under the Representation of Peoples Act if a person having been elected as a member of a legislature, if he recives or if he is in receipt of any money from the Government flowing from the treasury, from the coffers of Governments, it amounts to office of profit. In order to save these members and legislators we have brought this. There may be M.L.As or M.L.Cs. There may be one or two points. But what is your answer to the point, you see, to save the member holding these offices, to see that these officers are not disqualified.

SRI M. MALLIKARJUNA KHARGE.—ML. A. or MLC........

SRI M. VEERAPPA MOILY.—You want to save.

PROF A. LAKSHMI SAGAR.—How are we saved ? Ministers, M. L. As receive salary and number of other perks. They are all monies paid by the Government out of consolidated fund of the State. Same provision is being extended to those gentleman.

SRI MALLIKARJUNA M. KHARGE.—So, it is a political bill.

SRI M. VEERAPPA MOILY,—Let us not.........

SRI MALLIKARJUN M. KHARGE.—Now the cat is out of the bag.

PROF A. LAKSHMI SAGAR.—They are politicians, you are politician, and we are all politicians. Let us not be hypocrtic. What is permissible, you see in the politics is being done openly, notoriously, Mr. Speaker, Sir, In a democracy vigilance is the eternal liberty, It on open from the members of the public to gruand against these things,

SRI M. VEERAPPA MOILY.—Have you consulted the Advocate General ? What is the legalopinion about it ? Please let me know.

SRI S. BANGARPPA.—He himselef is a professor of law.

PROF A. LAKSHMI SAGAR.—Before a piece of legislation is brought it all conisidered by the Law Department, it goes before the Serutine Committee, it is approved by the Cabinet and there after it becomes in the from of a bill. ರಿಕಾರ್ಡ್ ತೆಗೆದುಕೊಂಡು ಬನ್ನಿ ಫೈಲ್ ತೆಗೆದುಕೊಂಡು ಬನ್ನಿ ಅಂದರೆ ಏನು ವಾದ ನಿಮ್ಮದು ? Is this an argument ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹೋಟೆಲ್ ಬಿಲ್ ಏನು ಇದು, ಹಾಗೇನೇ ಮಂಜೂರು ಮಾಡುವುದಕ್ಕೆ. ಅಷ್ಟಕ್ಕೆ ಏಕೆ ಕೋಪ ಮಾಡಿಕೊಳ್ಳುತ್ತೀರಿ ?

ಪ್ರೊ॥ ಎ. ಲಕ್ಷ್ಮೀಸಾಗರ್.—ಮಾತನಾಡಲಿ, ಬೇಡ ಎಂದು ಹೇಳುವುದಿಲ್ಲ, ರಿಸನಬಲ್ಲಾಗಿ ಮಾತನಾಡಿ ಎಂದು ಹೇಳಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ಈ ರೀತಿಯಾಗಿ ಹೇಳುವುದು ಸರಿಯಲ್ಲ. ಮಾತನಾಡ ಬೇಡಿ ಅಂದರೆ ಏನು ಅರ್ಥ.

PROF A. LAKSHMI SAGAR.—Iam only saying the line of argument and the contents of the argument ಮಾತನಾಡಿ, ಬೇಡ ಎಂದು ಹೇಳುವುದಿಲ್ಲ. I am sorry, let him say whatever he likes.

SRI M. VEERAPPA MOILY.—Sir, ಈಗ ಸರಿ ದಾರಿಗೆ ಬಂದರು. ನಮಗೆ ಏನು ಕಷ್ಟ ಅಂದರೆ, ಲಕ್ಷ್ಮಿ ಸಾಗರ್‌ರವರು ತಾವು ಹೇಳಿದ್ದೇ ಸರಿ ಹಿಡಿದದ್ದೇ ಬಡಿಗೆ, ಬಾಕಿಯವರದ್ದು ಬಡಿಗೆಯಲ್ಲ ಎನ್ನುವ ರೀತಿ ಮಾತನಾಡುತ್ತಾರೆ.

MR. SPEAKER.—You are a prosecution lawyear and he is a defence lawyear. ಒಮ್ಮೊಮ್ಮೆ ಅವರು ಪ್ರಾಸಿಕ್ಯೂಷನ್ ಲಾಯರ್ ಆಗುತ್ತಾರೆ, ಇವರು ಡಿಫೆನ್ಸ್ ಲಾಯರ್ ಆಗುತ್ತಾರೆ. ಅಪರಾಧಿ ಯನ್ನು ನಿರಪರಾಧಿ ಎಂದು ಹೇಳುವುದು, ನಿರಪರಾಧಿ ಯನ್ನು ಅಪರಾಧಿ ಎಂದು ಹೇಳುವುದು.

ಶ್ರೀ ಎಸ್. ಬಂಗಾರಪ್ಪ.—ಕೆಣಕುವುದು ಬೇಡ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಕೆಣಕುತ್ತಾ ಇಲ್ಲ, ನಾನು ಅವರ ಕಡೆ ನೋಡುವುದಿಲ್ಲ, ಅಧ್ಯಕ್ಷರ ಕಡೆಗೆ ನಾನು ನೋಡುವುದು ಬಹಳವಾಗಿ. ಅವರು ಸುಲಭವಾಗಿ ಕೆಣಕಿಸಿಕೊಳ್ಳುತ್ತಾರೆ. ಅವರು ಯಾವಾಗಲೂ ರೇಗಿಕೊಂಡೇ ಇರುವುದು. ಇತ್ತೀಚಿಗೆ ನಿನ್ನೆ, ಮೊನ್ನೆಯಿಂದ ಸ್ಪಿರಿಟ್ ಆಗಿಬಿಟ್ಟಿದ್ದಾರೆ. ಕೆಲವು ದಿವಸ ಸುಮ್ಮನೆ ಇದ್ದರು. ಈಗ ಇದರಲ್ಲಿ ಏನು ವಿಚಾರ ಇದೆಯೆಂದರೆ, ಆಸರರಿಯಂ ಕೊಡತಕ್ಕದ್ದು ಇದೆ. ಸರ್ಕಾರದ ಅಭಿಪ್ರಾಯದ ಪ್ರಕಾರ ಜಿಲ್ಲಾಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಯಾರು ಇದ್ದಾರೆ ಅವರು ವಿಧಾನಸಭೆಗೆ ಅಥವಾ ವಿಧಾನ ಪರಿಷತ್ತಿಗೆ ಕಂಟೆಸ್ಟ್ ಮಾಡಲಿಕ್ಕೆ ಆಗುವುದಿಲ್ಲ ಎನ್ನುವ ವಿಚಾರ ಇದೆ. ಬಟ್ ಫಾರ್‌ದೀಸ್ ಈಗ ಅನೇಕ ಜನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಕಂಟೆಸ್ಟ್ ಮಾಡಿದ್ದಾರೆ. ಯಾರು ಡಿಸ್‌ಕ್ವಾಲಿಫೈ ಆಗಲಿಲ್ಲ. ಅಂತಹ ಕಂಟಿಜೆನ್ಸಿ ಬರಲೇ ಇಲ್ಲ. ನಾಟ್ ಎ ಡಿಸ್‌ಕ್ವಾಲಿಫಿಕೇಷನ್ ಅಕಾರ್ಡಿಂಗ್ ಟು ಮಿ. ಅದರ ಉದ್ದೇಶದಿಂದ ಮಾಡಲಿಲ್ಲ. ಇದರ ಉದ್ದೇಶ ಏನೆಂದರೆ", ವಿಧಾನಸಭೆಯ ಸದಸ್ಯರು ವಿಧಾನ ಪರಿಷತ್ತಿನ ಸದಸ್ಯರೂ ಕೂಡ ಜಿಲ್ಲಾಪರಿಷತ್ತಿನ ಅಧ್ಯಕ್ಷರು, ಉಪಾಧ್ಯಕ್ಷರು ಆಗಿದ್ದವರು ಅಥವಾ ಎಂ. ಎಲ್.ಎ.ಎಂ. ಎಲ್. ಸಿ. ಆಗಿದ್ದರೆ ಅದನ್ನು ಮುಂದುವರಿಸಲಿಕ್ಕೆ ಒಂದು ರೀತಿಯಲ್ಲಿ ರಾಜಕೀಯ ಪ್ರದಾನ ಮಾಡಲಿಕ್ಕೆ ಸ್ಪೆಷಲ್ ಕನ್ಸಿಡರೇಷನ್ನನ್ನು ಇದರಲ್ಲಿ ಮಾಡಿದ್ದಾರೆ. ಅದನ್ನು ಈ ಉದ್ದೇಶದಿಂದ ಮಾಡಿದ್ದಾರೆಯೇ ಹೊರತು ಇದರ ಹಿಂದೆ ಯಾವ ಸಿದ್ಧಾಂತವೂ ಕೂಡ ಇಲ್ಲ. ಯಾವ ತರ್ಕವೂ ಕೂಡ ಇಲ್ಲ. ತರ್ಕವೂ ಇಲ್ಲ. ಸಿದ್ಧಾಂತ ತರ್ಕವೂ ಇಲ್ಲ. Otherwise, some of the ZP presidents who contested for MLCs last time, they coud not have contested at all. Therefore, this is not a disqualificaltionaccording to me. ಆದ್ದರಿಂದ, ಇದು ಅರ್ಥ ಇಲ್ಲದ ಮತ್ತು ಅಧಿಕಾರ ವಿಕೇಂದ್ರೀಕರಣದ ಸಿದ್ಧಾಂತಕ್ಕೆ ಕೊಡಲಿ ಏಟು ಕೊಡತಕ್ಕಂತಹ ಅಧಿಕಾರ

ವನ್ನು ಕೆಲವೇ ರಾಜಕೀಯ ಶಕ್ತಿಗಳು ಮತ್ತು ಕೇಂದ್ರ ಬಿಂದುಗಳಲ್ಲಿ ಕೇಂದ್ರೀಕರಿಸತಕ್ಕಂಥ ಒಂದು ಪ್ರಯತ್ನವೇ ಹೊರತು ಮತ್ತೆ ಬೇರೆ ಏನೂ ಅಲ್ಲ. ಅಧ್ಯಕ್ಷರೆ, ಇವೊತ್ತು ನಮ್ಮ ಉಪನಾಯಕರಾದಂಥ ಮಲ್ಲಿಕಾರ್ಜುನ ಖಾರ್ಗೆಯವರು ಹೇಳಿದಂತೆ, ಈಗ ಎರಡು ವರ್ಷಗಳು ಆಯಿತು. ಮಂಡಲ ಮತ್ತು ಜಿಲ್ಲಾಪರಿಷತ್‌ಗೆ ಮತ್ತೊಂದು ಸಮಗ್ರವಾದ ತಿದ್ದುಪಡಿಯನ್ನು ತರಬೇಕಾಗಿತ್ತು. ಅಲ್ಲಿ ಈಗ ಯಾವುದೇ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಆರ್ಥಿಕವಾಗಿ ಆಗಲಿ, ಅಭಿವೃದ್ಧಿ ಕಾರ್ಯಕ್ರಮಗಳಾಗಲಿ, ಮಾಡಲಿಕ್ಕೆ ಆಗುತ್ತಿಲ್ಲ. ಈಗ ಮಾರ್ಚಿ ತಿಂಗಳು ಇವೊತ್ತು, ನಿನ್ನೆಯಿಂದ ಎಲ್ಲಾ ಜಿಲ್ಲಾಪರಿಷತ್ ಮಂಡಲ್ ಪಂಚಾಯತ್‌ಗಳ ಬಿಲ್ಲುಗಳು ಟ್ರೆಜರಿಗೆ ಹೋದರೆ ತಡೆಹಿಡಿದು ನಿಲ್ಲಿಸಿ ಬಿಟ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಎರಡೂವರೆ ಕೋಟಿ ರೂಪಾಯಿ ಬಿಲ್ಲುಗಳನ್ನು ಜಿಲ್ಲಾಪರಿಷತ್‌ನವರು ಕಳುಹಿಸಿದರೆ ಟ್ರೆಜರಿಯಲ್ಲಿ ಬಂದ್ ಮಾಡಿದ್ದಾರೆ. They are going to save not less than about Rs 80 crores. They are going to block it to-day, tomorrow and day-after. ಹಾಗಾದರೆ ಅಧಿಕಾರ ವಿಕೇಂದ್ರೀಕರಣ ಹೇಗೆ ಮಾಡಿದಂತಾಯಿತು. ಸರ್ಕಾರ ಟ್ರೆಜರಿ ಮುಖಾಂತರ ಜಿಲ್ಲಾಪರಿಷತ್ ಮತ್ತು ಮಂಡಲ್‌ಗಳು ಸಂಪೂರ್ಣವಾಗಿ ಜೀವ ಹಿಂಡುವಂಥ ಒಂದು ಅಧಿಕಾರ ಕೇಂದ್ರ ಆದರೆ ನೀವು ಯಾವರೀತಿ ಈ ಅಧಿಕಾರದ ವಿಕೇಂದ್ರೀ ಕರಣದ ಸಿದ್ಧಾಂತಕ್ಕೆ ಬದ್ಧರಾಗಿದ್ದೀರಿ.

ಪ್ರೊ॥ ಎ. ಲಕ್ಷ್ಮೀಸಾಗರ್.--ಸಂಬಳ ಕೊಟ್ಟಿಲ್ಲವೇ ?

ಶ್ರೀ ಎಂ. ವೀರಪ್ಪಮೊಯಿಲಿ.—ಈಗ ಸಂಬಳಕ್ಕೂ ಕಷ್ಟವಾಗುತ್ತಿದೆ. ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೊಟ್ಟಂತಾದ್ದು, ಪಿ.ಡಬ್ಲ್ಯು.ಡಿ. ಇಲಾಖೆ ಬಿಲ್ಲುಗಳು, ನೀರಾವರಿ ಇಲಾಖೆಗೆ ಸಂಬಂಧಪಟ್ಟ ಬಿಲ್ಲುಗಳು ಇವೆಲ್ಲವನ್ನು ಟ್ರೆಜರಿಯಲ್ಲಿ ತಡೆಹಿಡಿದು ನಿಲ್ಲಿಸಿಬಿಟ್ಟಿದ್ದಾರೆ ಜಿಲ್ಲಾಪರಿಷತ್ತು ಮತ್ತು ಮಂಡಲಗಳ ಬಗ್ಗೆ ಇವೊತ್ತು ನಿಮ್ಮ ಸರ್ಕಾರ ವೇಸ್ ಅಂಡ್ ಮೀನ್ಸ್‌ನ ಪೊಸಿಷನ್‌ನ್ನು ಸುಧಾರಿಸತಕ್ಕ ಸಾಧನ ಕೇಂದ್ರಗಳನ್ನಾಗಿ ಪರಿವರ್ತನೆ ಮಾಡಿದ್ದೀರಿ. ಈ ಸರ್ಕಾರಕ್ಕೆ ಇದಕ್ಕಿಂತ ನಾಚಿಕೆಗೇಡಿನ ಪ್ರಸಂಗ ಮತ್ತೊಂದು ಇಲ್ಲ. ಆದ್ದರಿಂದ ತಾವು ಬೇಗ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಮಾಡಬೇಕು. ಬೇರೆ ಜಿಲ್ಲೆಯ ವಿಚಾರ ನನಗೆ ಗೊತ್ತಿಲ್ಲ. ವಿಧಾನ ಸಭೆಯಲ್ಲಿ ನಾವೆಲ್ಲ ಈ ಅಧಿಕಾರವನ್ನು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಜಿಲಾ ಮಟ್ಟದಲ್ಲಿ, ಮಂಡಲ ಮಟ್ಟದಲ್ಲಿ ಕೊಡಬೇಕೆಂದು ನಿರ್ಣಯ ಮಾಡಿ ಕಾನೂನು ಮಾಡಿರುವಾಗ ಇವೊತ್ತು ಅಂತಹ ಕೇಂದ್ರಗಳನ್ನು ತಯಾರು ಮಾಡಿ ಬೇರೆ ಬೇರೆ ಕೆಲವು ಗೌರವಧನ ತೆಗೆದು ಕೊಳ್ಳುವುದಕ್ಕೆ ಇಂತಹ ಅಧಿಕಾರಸ್ಥರನ್ನು ತಯಾರು ಮಾಡುವುದಿದ್ದರೆ ಅಂತಹ ಅಧಿಕಾರ ಸ್ಥಾನವನ್ನು ರಕ್ಷಣೆ ಮಾಡತಕ್ಕಂತಹ ಕೋಟೆಗಳನ್ನು ಸಿದ್ಧಪಡಿಸಲಿಕ್ಕೆ ತಮ್ಮ ಕಾನೂನು ಇರುವುದಿದ್ದರೆ ಬಹುಶಃ ಪ್ರಜಾಪ್ರಭುತ್ವದ ಯಾವುದೇ ಒಂದು ರೀತಿಯ ಒಂದು ಕಾರ್ಯಕ್ರಮಗಳಿಗೆ ತಾವು ಇವೊತ್ತು ಪ್ರೋತ್ಸಾಹ ಕೊಡುತ್ತಿಲ್ಲ, ಅಂತಹ ಕಾರ್ಯಕ್ರಮಗಳನ್ನು ಕುಂಠಿತಗೊಳಿಸತಕ್ಕ ಕಾರ್ಯಕ್ರಮವನ್ನು ಮಾಡುತ್ತಿದ್ದೀರಿ. ಅಧಿಕಾರ ಸ್ಥಾನವನ್ನು ಅಭದ್ರಗೊಳಿಸತಕ್ಕ ಕಾನೂನು ಯಾವುದೇ ತಂದಿದ್ದೀರಿ ಅದನ್ನು ವಿರೋಧ ಮಾಡುತ್ತೇನೆ ಅಂತಹ ಅಧಿಕಾರ ಸ್ಥಾನವನ್ನು ಭದ್ರಮಾಡತಕ್ಕ ಕೆಲಸಕ್ಕೆ ಹೋಗುವುದರ ಬದಲು ಇವೊತ್ತು ಕೊಟ್ಟಂತಹ ಅಧಿಕಾರವನ್ನು ಸರಿಯಾಗಿ, ಸಮರ್ಪಕವಾಗಿ, ದಕ್ಷತೆಯಿಂದ ನಿರ್ವಹಿಸತಕ್ಕ ಕೆಲಸ ಮಾಡಲಿಕ್ಕೆ ಇಂತಹ ತಿದ್ದುಪಡಿಯನ್ನು ತರಬೇಕೆಂದು ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಮಂಡಲಪಂಚಾಯತ್ ಮತ್ತು ಜಿಲ್ಲಾಪರಿಷತ್ ಆ್ಯಕ್ಟ್‌ನ ಉದ್ದೇಶ ಏನೆಂದರೆ, ಅಧಿಕಾರ ವಿಕೇಂದ್ರೀಕರಣ ಆಗಬೇಕು, ಸಾಧ್ಯವಾದಷ್ಟು ಎಂ. ಎಲ್ ಎ, ಎಂ. ಎಲ್. ಸಿ. ಗಳು ಪುನಃ ಜಿಲ್ಲಾಪರಿಷತ್ ಅಧ್ಯಕ್ಷರು, ಉಪಾಧ್ಯಕ್ಷರು ಆಗುವುದನ್ನು ತಪ್ಪಿಸಬೇಕು ಎಂದು. ಸ್ವಾಮಿ ಇದಕ್ಕೆ ಒಂದು ಚರಿತ್ರೆಯೇ ಇದೆ. ಆಂಧ್ರಪ್ರದೇಶದ ಆ್ಯಕ್ಟ್‌ನಲ್ಲಿ, ಪಶ್ಚಿಮ ಬಂಗಾಳದ ಆ್ಯಕ್ಟ್‌ನಲ್ಲಿ ನೋಡಿದರೆ ಇದಕ್ಕೆ ಒಂದು ಪ್ರೊಹಿಬಿಷನ್ ಇದೆ. ಇದು ಸಹ ಆ ರೀತಿ ಆಗಬಾರದು, ಅವರು ಪೂರ್ತಿಯಾಗಿ ಜಿಲ್ಲಾಪರಿಷತ್‌ನ ಕೆಲಸಗಳಿಗೆ ಸೀಮಿತವಾಗಿರಬೇಕೆಂಬ ಉದ್ದೇಶದಿಂದ ಈ ಡಿಸ್‌ಕ್ವಾಲಿಫಿಕೇಶನನ್ನು ತಂದಿದ್ದಾರೆ. ಅದನ್ನೇ ಇವರು ಕಸಿ ಮಾಡಿದ್ದಾರೆ. ಆದರೆ ಈಗ ಮತ್ತೆ ಅದನ್ನೆಲ್ಲ ಮರೆತು ಪುನಃ ಅಧಿಕಾರ ವಿಕೇಂದ್ರೀಕರಣಕ್ಕೆ ಬದಲಾಗಿ ಅಧಿಕಾರ ಕೇಂದ್ರೀಕರಣಕ್ಕೆ ಇವರು ಹೋಗುತ್ತಿದ್ದಾರೆ. ಇದು ಬಹಳ ಅನ್ಯಾಯ. ಮಾನ್ಯ ಲಕ್ಷ್ಮೀಸಾಗರ್‌ರವರು ಈ ತಿದ್ದುಪಡಿಯನ್ನು ತರುವುದಕ್ಕೆ ಮುಂಚಿತವಾಗಿಯೇ ಇದನ್ನು ಯೋಚನೆ ಮಾಡಬೇಕಾಗಿತ್ತು. ಸಾಮಾನ್ಯವಾಗಿ ನಾವು ಏನು ಈ ಬಿಲ್‌ಗಳಲ್ಲಿ ಓದುತ್ತೇವೆಂದರೆ. ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್, ಇನ್ನೊಂದು ಎಕ್ಸ್‌ಪ್ಲನೇಟರಿ ನೋಟ್. ಇವೆರಡನ್ನು ಮಾತ್ರ ನೋಡುತ್ತೇವೆ.

"Explanatory statement as required by Rule 79 (1) of the Rule of Procedure and Conduct of Business in the Karanataka Legislative Assembly.

It was considered necessary to amend the Karnataks Legislature (Prevention of Disqualification) Act, 1956 to declare that the office of the Adhyaksha and Upadhayaksha of the zilla parishads constituted under the Karnataka Zilla Parishads, Taluk Panchayat Samithis, Mandal Panchayats and Nyaya Panchayats Act, 1983 (Karnataka Act 20 of 1985) shall not disqualify and shall be deemed never to have disqualified a person for being chosen as or for being a Member of the Karnataka Legislative Assembly or the Karnataka Legislative Council."

ಎಂದು ಇದೆ. ಎಕ್ಸ್‌ಪ್ಲನೇಟರಿ ನೋಟ್‌ನಲ್ಲಿ ಅದನ್ನೇ ರಿಪೀಟ್ ಮಾಡುತ್ತಿದ್ದಾರೆ. ಇದರಲ್ಲಿ office of the profit ಎಂದು ಇದೆ. ಇದರಿಂದ ನಾಳೆ ಇವರು ಎಲೆಕ್ಷನ್‌ನಲ್ಲಿ ಕಂಟೆಸ್ಟ್ ಮಾಡುವುದಕ್ಕೆ ಬರುವುದಿಲ್ಲ. ಒಂದು ವೇಳೆ ಈ ಡಿಸ್‌ಕ್ವಾಲಿಫಿಕೇಷನ್ ತೆಗೆದುಹಾಕಬೇಕೆಂದು ಇವರ ಉದ್ದೇಶವಿದ್ದರೆ, ಇನ್ನೊಂದು ಉದ್ದೇಶ ಏನು ಇಲ್ಲಿ ಬರುತ್ತದೆಂದರೆ. ಯಾರಾದರೂ ಎಂ. ಎಲ್. ಎ, ಎಂ. ಎಲ್. ಸಿ. ಗಳು ಪವರ್‌ಫುಲ್ ಆದ್ದರೆ ಎರಡೂ ಸ್ಥಾನಗಳನ್ನು ಸಂಪಾದನೆ ಮಾಡಿಕೊಳ್ಳ ಬಹುದಾದ ಸಂದರ್ಭ ಇದೆ. ನನಗೆ ಏನು ಅನುಮಾನ ಬಂದಿದೆ ಅದನ್ನು ಹೇಳುತ್ತಿದ್ದೇನೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ದಯುವಿಟ್ಟು ಆರೀತಿ ಹೇಳಬಾರದು. ಎರಡೂ ಕಡೆ ಸಂಪಾದನೆ ಎಂದು ಹೇಳಬಾರದು.

ಶ್ರೀ ಆರ್, ವೆಂಕಟರಾಮಯ್ಯ.—ಅವರು ಎರಡೂ ಸ್ಥಾನಗಳ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಇದರ ಪ್ರಕಾರ ಎರಡೂ ಸ್ಥಾನಗಳನ್ನು ಸಂಪಾದನೆ ಮಾಡಿಕೊಳ್ಳುವುದಕ್ಕೆ ಯಾರಾದರೂ ಪ್ರಯತ್ನ ಮಾಡಬಹುದು. ಇದರಿಂದ ಅಧಿಕಾರ ಕೇಂದ್ರೀಕರಣವಾಗುತ್ತದೆಯೇ ಹೊರತು ಅಧಿಕಾರ ವಿಕೇಂದ್ರೀಕರಣ ಆಗುವುದಿಲ್ಲ. ಇದು ಅಕ್ಕರೆ ಇಲ್ಲದ ಮಸೂದೆ ಆಗಿದೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರ ಏನೆಂದರೆ ೩೧ನೇ ತಾರೀಖಿನೊಳಗೆ ಎಲ್ಲಾ ಬಿಲ್ಲುಗಳನ್ನೂ ಪಾಸ್ ಮಾಡಬೇಕಾಗಿದೆ. ದಯವಿಟ್ಟು ಮಾಡಿ. ಸದನದ ಮುಂದೆ ಬಹಳಷ್ಟು ಬಿಲ್ಲುಗಳು ಪೆಂಡಿಂಗ್ ಇವೆ. ಜನತಾ ಮನೆಗಳಿಗೆ ಸಂಬಂಧಪಟ್ಟಂತೆ ದುಡ್ಡು ರಿಲೀಸ್ ಆಗಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಹಣಕಾಸಿನ ಪರಿಸ್ಥಿತಿ ತೀರಾ ಬದಲಾಗಿದೆ. ಎಲ್ಲ ಜನತಾ ಮನೆಗಳ. ಬಿಲ್ಲುಗಳು ಫೈನಾಲೈಸ್ ಆಗಬೇಕಾಗಿದೆ. ಜೀರೋ ಬೇಸ್ಡ್ ಬಜೆಟನ್ನು ಮಾಡುತ್ತೇವೆಂದು ಜಿಲ್ಲಾ ಪರಿಷತ್ತಿನವರು ಹೆದರಿಸುತ್ತಿದ್ದಾರೆ. ಜೀರೋ ಬೇಸ್ಡ್ ಬಜೆಟನ್ನು ಮಾಡಬೇಕಾದರೆ ಅವರು ಏನೇನು ಪರಿಹಾರಗಳನ್ನು ಕೊಡಬೇಕೋ ಅದನ್ನೆಲ್ಲಾ ಕ್ಲಿಯರ್ ಮಾಡಬೇಕು. ಇವತ್ತು ೨ ಲಕ್ಷ ರೂಪಾಯಿಗಳ ಬಿಲ್ಸ್ ಪೆಂಡಿಂಗ್ ಇದ್ದರೆ ಇವರು ೫೦ ಸಾವಿರ ರೂಪಾಯಿಕೊಟ್ಟು ಇದರಲ್ಲೇ ಅಡ್ಜಸ್ಟ್ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಇದು ತಪ್ಪಬೇಕು. ಅಧಿಕಾರ ವಿಕೇಂದ್ರೀಕರಣ ಆಗಬೇಕಾದರೆ ನೀವು ಇದನ್ನು ಸರಿಯಾಗಿ ನಡೆಸಬೇಕು. ಇಲ್ಲದಿದ್ದರೆ ಆಗುವುದಿಲ್ಲ. ಆದ್ದರಿಂದ ಇದು ಒಂದು ಅಕ್ಕರೆ ಇಲ್ಲದ ಬಿಲ್ ಆಗಿರುವುದರಿಂದ ಇದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ವಿನಂತಿಮಾಡುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಭಾಧ್ಯಕ್ಷರೆ, ಈ ಬಿಲ್‌ಗೆ ಮಾನ್ಯ ಸಚಿವರು ಏನು ತಿದ್ದುಪಡಿಯನ್ನು ತಂದಿದ್ದಾರೆ ಇದು ತುಂಬಾ ಅಗತ್ಯ ಇದೆಯೆಂದು ಒಪ್ಪಿಕೊಂಡರೂ ಕೂಡ ಇನ್ನೊಂದು ಕಡೆ ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಏನೆಂದರೆ, ಇವತ್ತು ಯಾರೇ ಒಬ್ಬ ಎಂ. ಎಲ್. ಎ. ಅಥವಾ ಎಂ. ಎಲ್. ಸಿ. ಯಾಗಲಿ, ಆತ ಜಿಲ್ಲಾಪರಿಷತ್ತಿಗೆ ಅಧ್ಯಕ್ಷ, ಅಥವಾ ಉಪಾಧ್ಯಕ್ಷ ಆಗುವಂತಿಲ್ಲ ಎಂದು ಈ ಆ್ಯಕ್ಟ್‌ನಲ್ಲಿ ಸ್ಪಷ್ಟವಾಗಿದೆ. ಸ್ವಾಮಿ. ಒಬ್ಬ ಶಾಸಕನನ್ನು ಜಿಲ್ಲಾಪರಿಷತ್ತಿನಲ್ಲಿ ಸದಸ್ಯನನ್ನಾಗಿ ಇಟ್ಟಿರುವಾಗ ಅಲ್ಲಿ ಅವನು ತನ್ನ ಅಧಿಕಾರವನ್ನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಚಲಾಯಿಸುವ ಸಂದರ್ಭದಲ್ಲಿ ಆತ ಜಿಲ್ಲಾಪರಿಷತ್ತಿನ ಅಧ್ಯಕ್ಷ, ಉಪಾಧ್ಯಕ್ಷ ಆಗಬಾರದೆಂದು ಇವರು ಯಾವ ಕಾರಣಕ್ಕಾಗಿ ಇಲ್ಲಿ ತಿದ್ದುಪಡಿಯನ್ನು ತಂದಿದ್ದಾರೋ ನನಗಂತೂ ಗೊತ್ತಿಲ್ಲ. ಈ ಸಂದರ್ಭದಲ್ಲಿ ತಮಗೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಬಿ. ಎಲ್. ಗೌಡರು ಹಿಂದೆ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿದ್ದಾಗ ಅವರು ಎಂ. ಎಲ್. ಎ. ಆಗಿ ಆರಿಸಿ ಬಂದರು. ಅವರು ಈ ಎರಡೂ ಸ್ಥಾನಗಳಲ್ಲಿ ಮುಂದುವರೆಯಬೇಕೋ ಬೇಡವೋ ಎಂಬ ಪ್ರಶ್ನೆ ಬಂದು ಅದು ಹೈಕೋರ್ಟಿಗೆ ಹೋದಾಗ ಯಾವ ಶಾಸಕರೂ ತಾಲೂಕು ಬೋರ್ಡ್‌ನ ಅಧ್ಯಕ್ಷರಾಗಿರಬಾರದೆಂದು ತಾಲೂಕು ಬೋರ್ಡ್ ಆ್ಯಕ್ಟ್‌ನಲ್ಲಿ ಸ್ಪಷ್ಟವಾಗಿದ್ದರೂ ಕೂಡ ಅದನು ಹೈಕೋರ್ಟ್ ಕಿತ್ತೊಗೆದು ಎರಡೂ ಸ್ಥಾನಗಳಲ್ಲಿ ಶಾಸಕನಾದವನು ಮುಂದುವರೆಯಬಹುದೆಂದು ತೀರ್ಪನ್ನು ಕೊಟ್ಟಿತು. ಆ ತೀರ್ಪಿನ ಪ್ರಕಾರ ಮಾನ್ಯ ಬಿ. ಎಲ್. ಗೌಡರು ಎರಡೂ ಸ್ಥಾನಗಳಲ್ಲಿ ಮುಂದುವರೆಯುವರೆಂದು ನನಗೆ ತಿಳಿದು ಬಂದಿದೆ. ನಾಳೆ ಯಾರೂ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಬೇಕು, ಯಾರು ಆಗಬಾರದೆಂಬ ಬಗ್ಗೆ ಅಲ್ಲಿರುವ ಚುನಾಯಿತ ಸದಸ್ಯರು ತೀರ್ಮಾನ ಮಾಡಿಕೊಳ್ಳಲಿ. ಆದರೆ ಎಂ. ಎಲ್. ಎ. ಅಥವಾ ಎಂ. ಎಲ್. ಸಿ. ಯಾದವನು ಜಿಲ್ಲಾ ಪರಿಷತ್ತಿನ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಬಾರದೆಂದು ಸರ್ಕಾರದವರು ಏತಕ್ಕೆ ತಿದ್ದುಪಡಿಯನ್ನು ಇಲ್ಲಿ ತಂದಿದ್ದಾರೋ ನನಗಂತೂ ಗೊತ್ತಾಗುತ್ತಿಲ್ಲ. ಒಂದು ಸಾರಿ ಈ ರೀತಿ ಶಾಸಕರಾದವರು ಜಿಲ್ಲಾಪರಿಷತ್ ಸದಸ್ಯರಾಗಬಹುದು ಎಂದಾಗ ಜಿಲ್ಲಾ ಪರಿಷತ್‌ಗೆ ಸದಸ್ಯರು ಎಂ. ಎಲ್. ಎ. ಆಗಬಹುದೆಂದಾಗ ಅಧಿಕಾರ ವಿಕೇಂದ್ರೀಕರಣದ ಅರ್ಥವೇನು ? ನಿಜವಾದಂಥ ನಿಮ್ಮ ಉದ್ದೇಶ ಸಫಲವಾಗಲಿಕ್ಕಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಅದಕ್ಕೋಸ್ಕರ ಈ ಅಮೆಂಡ್‌ಮೆಂಟ್ ತಂದಿರುವ ಸಂದರ್ಭದಲ್ಲಿ ಅದರ ಜೊತೆಗೆ ಯಾವುದೋ ಒಬ್ಬ ಶಾಸಕರಿಗೆ ಜಿಲ್ಲಾಪರಿಷತ್ ಅಧ್ಯಕ್ಷ ಆಗಬಹುದು ಉಪಾಧ್ಯಕ್ಷ ಬೇಕಾದರೆ ಆಗಬಹುದು ಎನ್ನುವ ಅಗತ್ಯವಿತ್ತು ಎನ್ನುವುದು ನನ್ನ ಭಾವನೆಯಾಗಿದೆ. ಎರಡನೆಯದು ನಮಗೆ ಸ್ವಾಭಿಮಾನ ನಮ್ಮ ಶಾಸಕರಿಗೆ ಯಾರಿಗಾದರೂ ಇದ್ದರೆ ತುಂಬ ನೊಂದು ಒಂದು ಮಾತನ್ನು ಹೇಳುತ್ತೇನೆ. ಜಿಲ್ಲಾ ಪರಿಷತ್ತಿನಲ್ಲಿ ಹೋಗಿ ಕುಳಿತುಬಂದಾಗ ಏನು ಗೌರವ ಇದೆ ಸ್ವಾಮಿ ? ಒಬ್ಬ ಶಾಸಕನಾದಂಥವನು ಜಿಲ್ಲಾಪರಿಷತ್ತಿನಲ್ಲಿ ಕುಳಿತುಕೊಂಡು ನಮ್ಮ ಒಂದು ಮಾತು ಅಲ್ಲಿ ಏನು ನಡೆಯುತ್ತಿದೆ ? ಒಬ್ಬ ಜಿಲ್ಲಾಪರಿಷತ್ತಿನ ಸದಸ್ಯ ಹೇಳುತ್ತಾನೆ, ಏನೆಂದರೆ ನಾವೇನಾದರೂ ಪ್ರಸ್ತಾಪ ಮಾಡಿದರೆ, ನೀವೇನಾದರೂ ಮಾತನಾಡುವುದಿದ್ದರೆ ಅಸೆಂಬ್ಲಿಗೆ ಹೋಗಿ ಮಾತನಾಡಿ, ಎಂದು ಇವತ್ತಿನ ಈ ಅವ್ಯವಸ್ಥೆಗೆ ನೀವೇ ಕಾರಣ, ಆದ್ದರಿಂದ ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡಿ, ಇಲ್ಲಿ ಮಾತನಾಡು ಅಗತ್ಯವಿಲ್ಲವೆನ್ನುವ ಮಾತನ್ನು ಹೇಳುತ್ತಾನೆ ನಾವು ಶಾಸಕರಾಗಿರುವ ಒಬ್ಬ ವ್ಯಕ್ತಿ ಜಿಲ್ಲಾಪರಿಷತ್ತಿನ ಸದಸ್ಯನಾಗಿ ಅಲ್ಲಿನಾದರೂ ಚೇರ್‌ಮನ್ ಆಗಿದ್ದರೆ, ನಾವು ಹೋಗಿ ಕೈಕಟ್ಟಿ ಅವನ ಹತ್ತಿರ ತಲೆತಗ್ಗಿಸಿ ನಿಂತುಕೊಳ್ಳುವ ಪರಿಸ್ಥಿತಿಗೆ ಇವತ್ತು ಶಾಸಕರನ್ನು ತಂದಿರುತ್ತೀರಾ ? ತಾಲೋಕಿನಲ್ಲಿರುವ ಯಾವುದೇ ಒಬ್ಬ ವ್ಯಕ್ತಿ ಇಂಥ ಕೆಲಸವಾಗಬೇಕೆಂದು ಹೇಳಿದರೆ ಆಯಿತು ಮಾಡಿಸಿಕೊಡುತ್ತೇನೆಂದು ಹೇಳುವಂಥ ಧೈರ್ಯವಿಲ್ಲದಂಥ ಪರಿಸ್ಥಿತಿಗೆ ನಮ್ಮನ್ನು ತಂದಿದ್ದೀರಿ. ಅಧಿಕಾರ ವಿಕೇಂದ್ರೀಕರಣವಾಗಬೇಕು ನಾವು ಬೇಡವೆಂದು ಹೇಳುವುದಿಲ್ಲ. ಆದರೆ ಶಾಸಕನಾಗಿರುವವನು ಅವನು ತನ್ನ ಕ್ಷೇತ್ರದಲ್ಲಿ ಸರಿಕಂಡದನ್ನು ಮಾಡಿಸಿಕೊಳ್ಳುವಂಥ ವಿಚಿತ್ರ ಪರಿಸ್ಥಿತಿಗೆ ನಮ್ಮನ್ನು ತಂದಿದ್ದೀರಿ. ಶಾಸಕನಾದವನು ಇದಾಗಬೇಕೆಂದು ಪತ್ರ ಕೊಟ್ಟಾಗ ಜಿಲ್ಲಾಪರಿಷತ್ತಿನ ಒಬ್ಬ ಸದಸ್ಯನಾಗಿ ತಾನು ತನ್ನ ಕ್ಷೇತ್ರಕ್ಕೆ ಇದಾಗಬೇಕೆಂದು ಅರ್ಜಿ ಬರೆದುಬಿಡುತ್ತಾನೆ. ತಾಲ್ಲೂಕಿನ ಸದಸ್ಯನಾಗಿ ಶಾಸಕನಾಗಿ ನಾನು ಪತ್ರ ಬರೆದರೆ ಜಿಲ್ಲಾಪರಿಷತ್ತಿನ ಸಬ್‌ಕಮಿಟಿಮೀಟಿಂಗ್‌ನಲ್ಲಿ ತೀರ್ಮಾನವಾಗುತ್ತದೆ. ಜಿಲ್ಲಾಪರಿಷತ್ ಸದಸ್ಯರಿಗೆ ಈ ರಸ್ತೆಯಾಗಬೇಕೆಂದು ಗೊತ್ತಿರುವುದರಿಂದ ಶಾಸಕರ ಮಾತು ಅಗತ್ಯವಿಲ್ಲ. ಇವತ್ತು ಜಿಲ್ಲಾ ಪರಿಷತ್ ಸದಸ್ಯರ ಮಾತಿಗೆ ಮಾನ್ಯತೆ ಕೊಡಬೇಕೆಂದು ತೀರ್ಮಾನವಾಗಿರುವಂಥ ನೂರಾರು ಉದಾಹರಣೆಗಳಿವೆ. ಅಂದರೆ ಶಾಸಕರ ಮಾತಿಗೆ ಬೆಲೆ ಎಲ್ಲಿದೆ ? ಈ ಸದನದಲ್ಲಿ ಕುಳಿತು ಕಾನೂನು ಮಾಡುವಷ್ಟು ಮಟ್ಟಿಗೆ ನಮ್ಮ ಸ್ಥಿತಿ ಬಂದಿದೆ. ಯಾವ ಸಾಮಾನ್ಯ ಜನ ನಮ್ಮನ್ನು ನಂಬಿಕೊಂಡು ಚುನಾವಣೆಯಲ್ಲಿ ಗೆಲ್ಲಿಸಿ ಎಂ. ಎಲ್. ಎ. ಮಾಡಿ ಕಳುಹಿಸಿದ, ಅವನಮುಂದೆ ಇವತ್ತು ಅಧಿಕಾರ ವಿಕೇಂದ್ರೀಕರಣ ಆದಮೇಲೆ ಶಾಸಕ ತಲೆತಗ್ಗಿಸಿಕೊಂಡು ತಿರುಗಾಡಬೇಕಾಗಿ ಬಂದಿದೆ. ಅದರ ಅರ್ಥ ಅಧಿಕಾರ ವಿಕೇಂದ್ರೀಕರಣ ಮಾಡಬಾರದು ಎಂದು ಹೇಳುವುದಿಲ್ಲ. ಇವತ್ತು ಶಾಸಕನ ಸ್ಥಾನಮಾನಗಳು ಏನಿತ್ತೋ ಅದನ್ನು ಸಹ ಅವನ ಗೌರವವನ್ನು ಉಳಿಸುವುದು. ಅವನ ಮಾತಿಗೆ ಸ್ವಲ್ಪ ಬೆಲೆಸಿಗುವಂತೆ ಮಾಡಿಲ್ಲದ ಪರಿಣಾಮ ನಾಳೆ ಇಲ್ಲಿ ಚುನಾಯಿತ ಪ್ರತಿನಿಧಿಗಳು ೨೨೪ ಜನ ನಾಳೆ ವಿಧಾನಸಭೆ ಚುನಾವಣೆ ಪ್ರಾರಂಭವಾದಾಗ ನಮಗೆ ಗೊತ್ತಾಗುತ್ತದೆ. ಜನ ನಮ್ಮ ಬಗ್ಗೆ ಹಗುರವಾಗಿ ಮಾತನಾಡುತ್ತಾರೆ. ಅಲ್ಲಿ ಯಾವ ಜಿಲ್ಲಾಪರಿಷತ್‌ನಲ್ಲಿ ಯಾವುದೇ ಪಕ್ಷ ಇರಲಿ. ಪಕ್ಷ ಪಂಗಡದ ಪ್ರಶ್ನೆಯಲ್ಲ. ಅಧಿಕಾರದ ವಿಕೇಂದ್ರೀಕರಣದ ಹೆಸರಿನಲ್ಲಿ ಶಾಸಕರ ಸ್ಥಾನಮಾನಗಳನ್ನು ತುಂಬ ಗಡೆ ತಂದಿಟ್ಟಿದ್ದೀರಿ. ನಾವು ಇಲ್ಲಿ ಗೌರವದಿಂದಿರ ದುಸ್ಥಿತಿಗೆ ತಂದಿದ್ದೀರಿ. ತಾವು ಹೇಳಿದಿರಿ

ಬಜೆಟ್ ಬಗ್ಗೆ ಮಾತನಾಡುವಾಗ ಮತ್ತು ಗೌವರ್ನರ್ ಸ್ಪೀಚ್ ಬಂದ ಸಮಯದಲ್ಲಿ ಕೂಡ ಇದೇ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು. ಇಲ್ಲಿ ಅನೇಕ ಮಾರ್ಪಾಡುಗಳು ಆಗಬೇಕಾಗಿದೆ, ಆದ್ದರಿಂದ ಹಿರಿಯರಿಂದ ಕೂಡಿದ ಸಲಹಾ ಸಮಿತಿ ಮಾಡಿದ್ದೇವು, ಅವರಿಂದ ಒಂದು ವರದಿಯನ್ನು ತರಿಸಿಕೊಳ್ಳುತ್ತೇವೆಂದು ಹೇಳಿ ವರ್ಷಗಳೇ ಆದರೂ ಸಹ ಈವತ್ತು ಶಾಸಕರ ಸ್ಥಾನಮಾನಗಳ ಬಗ್ಗೆ ಇನ್ನು ಸ್ಪಷ್ಟವಾಗಿಲ್ಲ. ಆದ್ದರಿಂದ ಇವತ್ತು ಈ ಒಂದು ಅಮೆಂಡ್‌ಮೆಂಟ್ ಏನು ಇದೆ ಇದರ ಅಗತ್ಯವಿದೆ, ನೀವು ಮಾಡಿ ಯಾವುದೇ ಜನ ಅಲ್ಲಿ ಅಧಿಕಾರದಲ್ಲಿದ್ದರು ಸಹ ಇದನ್ನು ತರಬೆಕಾದ ಒಂದು ಅಮೆಂಡ್‌ಮೆಂಟ್ ಅನ್ನು ತಾವು ತಂದಿದ್ದೀರ. ಅದರ ಬಗ್ಗೆ ವಿರೋಧ ಇಲ್ಲ. ಆದರೆ ಶಾಸಕರ ಸ್ಥಿತಿಗತಿ ಜಿಲ್ಲಾಪರಿಷತ್‌ನಲ್ಲಿ ಯಾವ ಮಟ್ಟಕ್ಕೆ ಬಂದಿದೆ. ಇದರ ಬಗ್ಗೆಯೂ ಸಹ ತಾವು ಆಡಳಿತ ಪಕ್ಷದಲ್ಲಿದ್ದೀರಿ, ನಾನು ಒಬ್ಬ ಇದ್ದೇನೆ ಎನ್ನುವ ಪ್ರಶ್ನೆಯಲ್ಲ. ಚುನಾಯಿತ ಪ್ರತಿನಿಧಿಯಾಗಿ ಒಬ್ಬ ಶಾಸಕನಾಗಿ ನಮಗೆ ಗೌರವ ಬರುವ ರೀತಿ ಜಿಲ್ಲಾ ಪರಿಷತ್‌ನಲ್ಲಿ ನಡೆದುಕೊಳ್ಳುವರೀತಿ ಆ ಕ್ಷೇತ್ರದ ಆಗುಹೋಗುಗಳ ಬಗ್ಗೆ ಡೆವಲಪ್‌ಮೆಂಟ್‌ವರ್ಕ್ ವಿಚಾರ ಬಂದಾಗ, ಕೊನೆಪಕ್ಷ ಅವರು ಹೇಳಿನಂತಹ ಕೆಲಸವಾಗಬೇಕೆನ್ನುವಂಥ ಒಂದು ಸ್ಥಿತಿಗೆ ನಾವು ಬಂದು ಮುಟ್ಟಿದ್ದೇವೆ. ಆರೀತಿಯ ಒಂದು ಮಾರ್ಪಾಡನ್ನು ಕಾನೂನಿನಲ್ಲಿ ತರುವಂಥ ಸ್ಥಿತಿಗೆ ನಾವು ಬಂದಿದ್ದೇವೆ. ನಮ್ಮನ್ನು ತಾಲ್ಲೂಕ್ ಪಂಚಾಯಿತಿ ಅಧ್ಯಕ್ಷರಾಗಿ ಮಾಡಿದ್ದೀರಿ ಸ್ವಾಮಿ. ತಾಲ್ಲೂಕು ಪಂಚಾಯಿತಿ ಅಧ್ಯಕ್ಷನಾಗಿ ಏನಿದೆ ? ಮಂಡಲ ಪಂಚಾಯಿತಿ ಜಿಲ್ಲಾ ಪರಿಷತ್ತಿಗೆ ಮಧ್ಯದಲ್ಲಿ ನೆಪಮಾತ್ರಕ್ಕೆ ತಾಲ್ಲೂಕ್ ಪಂಚಾಯತಿ ಅಧ್ಯಕ್ಷರಾಗಿದ್ದೇವೆಯೇ ಹೊರತು ನಮ್ಮ ಯಾವುದೇ ಮಾತಿಗೆ ಬೆಲೆ ಇಲ್ಲ, ನೀವು ಕಳುಹಿಸಿ ಕೊಟ್ಟಂತಹ ಯಾವುದಕ್ಕೂ ಬೆಲೆಯಿಲ್ಲ, ಪೋಸ್ಟ್ ಆಫೀಸಿನಂತೆ ಕೆಲಸ ಮಾಡುತ್ತಿದ್ದೇವೆ ಏತಕ್ಕೋಸ್ಕರ ನಮ್ಮನ್ನು ಈ ದುಸ್ಥಿತಿಗೆ ತಂದಿರಿಸಿದ್ದೀರಿ ? ಏನೋ ಅಧಿಕಾರದ ವಿಕೇಂದ್ರೀಕರಣದ ಮಾತಿನಲ್ಲಿ ಶಾಸಕನ ಸ್ಥಾನಮಾನ ಮರ್ಯಾದೆಗೆ ಧಕ್ಕೆ ಬರದಹಾಗೆ ಚುನಾಯಿತ ಪ್ರತಿನಿದಿಯಾಗಿ ತನ್ನ ಕರ್ತವ್ಯ ನಿರ್ವಹಿಸುವುದಕ್ಕೆ ಜನಗಳ ಸ ಕಷ್ಟವನ್ನು ಬಗೆಹರಿಸುವುದಕೋಸ್ಕರ ನಾವು ಅಧಿಕಾರಕ್ಕೆ ಬಂದು ಈ ದುಸ್ಥಿತಿಗೆ ನಮ್ಮನ್ನು ತಂದು ತಲೆ ತಗ್ಗಿಸುವಂಥ ಸ್ಥಿತಿಗೆ ತಂದಿದ್ದೀರಿ ? ಜಿಲ್ಲಾಪರಿಷತ್ ಮಂಡಲ್ ಪಂಚಾಯತ್ ಆದಮೇಲೆ ಆ ಒಂದು ಸಂದರ್ಭದಲ್ಲಿ ಈ ಬಿಲ್‌ಗಳಿಗೆ ತಿದ್ದುಪಡಿಯನ್ನು ತರುವಂಥ ಸಂದರ್ಭದಲ್ಲಿ ಪೂರ್ಣ ಅಧ್ಯಯನಮಾಡಿ ಇದನ್ನು ತರಬೇಕಾಗಿತ್ತು. ಚುನಾವಣೆಗಳು ಹತ್ತಿರಬಂತು. ನಾಳೆ ವಿಧಾನ ಸಭಾ ಚುನಾವಣೆ ಆಗಬೇಕು. ಯಾರೋ ಒಬ್ಬ ಜಿಲ್ಲಾಪರಿಷತ್ ಸದಸ್ಯರನ್ನು ಅಧ್ಯಕ್ಷ ಇಲ್ಲವೇ ಉಪಾಧ್ಯಕ್ಷ ಚುನಾವಣೆಗೆ ನಿಲ್ಲಿಸಬೇಕು. ಅದಕ್ಕೇ ಒಂದು ಅಮೆಂಡ್‌ಮೆಂಟ್ ತರುವಂಥ ಒಂದು ಅವಸರದ ಕ್ರಮವಾಗಿದೆಯೇ ಹೊರತು ಪೂರ್ಣ ಅಭ್ಯಸಮಾಡಿ ಜಿಲ್ಲಾಪರಿಷತ್ತಿಗೆ ಈ ತಿದ್ದುಪಡಿ ಅಗತ್ಯವಿದೆ ಎನ್ನುವುದನ್ನು ಅಭ್ಯಾಸಮಾಡಿ ನಿಮ್ಮ ಅನುಭವದ ಆಧಾರದಮೇಲೆ ತಿದ್ದುಪಡಿ ತರುವಂಥ ಪ್ರಯತ್ನ ಇವೊತ್ತು ನಿಮ್ಮ ಕೈಯಲ್ಲಿ ಆಗುತ್ತಿಲ್ಲ. ಆ ದಿಕ್ಕಿನಲ್ಲಿ ವಿಶೇಷವಾದ ಗಮನವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿಸಿ ಇ ಒಂದು ತಿದ್ದುಪಡಿ ಆಗತ್ಯವಿದೆ. ಅದನ್ನು ಪಾಸ್‌ಮಾಡಿ. ನನ್ನದೇನು ವಿರೋಧವಿಲ್ಲ, ಇದು ಅಗತ್ಯವಿದೆ ಎನ್ನುವ ಮಾತನ್ನು ವ್ಯಕ್ತಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ (ಧಾರವಾಡ).—ಮಾನ್ಯ ಅಧ್ಯಕ್ಷರೆ, ಈ ಒಂದು ತಿದ್ದುಪಡಿಯನ್ನು ಅಗತ್ಯ ಇದ್ದುದರಿಂದ ತಂದಿದ್ದಾರೆ, ಅಗತ್ಯ ಇದ್ದುದಕ್ಕೆ ತಿದ್ದುಪಡಿ ತರಲಿ. ಅನೇಕ ಸದಸ್ಯರು ಇದನ್ನು ಒಪ್ಪಿದಂತೆ ನಾನು ಸಹ ಒಪ್ಪಿ ಇದನ್ನು ಸ್ವಾಗತಿಸುತ್ತಿದ್ದೇನೆ, ಆದರೆ ಜಿಲ್ಲಾ ಪರಿಷತ್ತಿನ ಮಸೂದೆಯನ್ನು ತರುವ ಮುಂಚೆ ಈ ರಾಜ್ಯದಲ್ಲಿ ಹೊಸ ಪ್ರಯೋಗ ನಡೆಸುವುದಕ್ಕೆ, ಮತ್ತು ಆ ಪ್ರಯೋಗದ ಮೂಲಕ ಬದಲಾವಣೆಗಳನ್ನು ಮಾಡಿಕೊಳ್ಳುವುದಕ್ಕೆ ಬರುತ್ತದೆಂದು ಇದನ್ನು ತಂದಿದ್ದಾರೆಂದು ನನ್ನ ಭಾವನೆ. ಅಧಿಕಾರ ವಿಕೇಂದ್ರಿಕರಣದ ವಿಷಯದಲ್ಲಿ ಯಾರದ್ದೂ ಭಿನ್ನಾಭಿಪ್ರಾಯ ಇಲ್ಲ ಆದರೆ ಜಿಲ್ಲಾ ಪರಿಷತ್ತಿನ ಸದಸ್ಯರು ಯಾವರೀತಿ ಅಧಿಕಾರವನ್ನು ಚಲಾವಣೆ ಮಾಡುತ್ತಿದ್ದಾರೆಂದರೆ ಆ ದಿಸೆಯಲ್ಲಿ ಅನೇಕ ಜನರ ಅಭಿಪ್ರಾಯಗಳು ಬಂದಿವೆ. ಆ ಎಲ್ಲಾ ಅಭಿಪ್ರಾಯಗಳು ಸತ್ಯಕ್ಕೆ ಸಮೀಪವಾದವು ಮತ್ತು ಅವುಗಳಿಂದ ಆಗುತ್ತಿರುವ ತೊಂದರೆಯನ್ನು ಕೂಡ ತಿಳಿಸಿದ್ದಾರೆ, ಮುಖ್ಯವಾಗಿ ನಾನು ಶಹರದಲ್ಲಿ ಅಂದರೆ ಮಹಾ ನಗರಸಭೆಯ ವ್ಯಾಪ್ತಿಯಲ್ಲಿರುವ ಶಾಸಕನಾಗಿ ನನಗೆ ಜಿಲ್ಲಾ ಪರಿಷತ್ತಿನಲ್ಲಿ ಕೆಲಸ ಮಾಡಲು ಅವಕಾಶ ಇಲ್ಲ. ಆದರೆ ಅದು ಎಂ.ಎಲ್.ಸಿ.ಗೆ ನಾಮಿನೇಟ್ ಮಾಡಿದವರಿಗೆ ಅಧಿಕಾರ ಇದೆ. ನಾವು ರಾಜ್ಯದಲ್ಲಿದ್ದುಕೊಂಡು ಬರೀ ಕಾನೂನು ಮಾಡಿ ಆ ಕಾನೂನಿನ ಮೂಲಕ.......

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಧ್ಯಕ್ಷರು.—ನಾನು ಕಾರ್ಪೊರೇಷನ್ ಪರಿಯಾದಲ್ಲಿರುವ ಶಾಸಕ ಎಂದು ಹೇಳಿ. ಎಲ್ಲರಿಗೂ ಗೊತ್ತಾಗಲಿ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಮಹಾನಗರಸಭೆಯ ವ್ಯಾಪ್ತಿಯಲ್ಲಿರುವ ಶಾಸಕನಾಗಿ ನನಗೆ ಜಿಲ್ಲಾ ಪರಿಷತ್ತಿನಲ್ಲಿ ಅವಕಾಶ ಇಲ್ಲ. ಪ್ರಾಥಮಿಕ ಶಿಕ್ಷಣ ಪ್ರೌಢ ಶಿಕ್ಷಣ ಇವೆಲ್ಲಾ ಜಿಲ್ಲಾ ಪರಿಷತ್ತಿನ ಅಧೀನದಲ್ಲಿ ಬರುತ್ತವೆ. ಅದೇ ಪ್ರಕಾರ ಆರೋಗ್ಯ ಮಹಿಳಾ ಕಲ್ಯಾಣ. ಮಕ್ಕಳ ಕಲ್ಯಾಣ ಎಲ್ಲಾ ಜಿಲ್ಲಾ ಪರಿಷತ್ತಿನ ಅಧೀನದಲ್ಲಿರುತ್ತವೆ. ಮಹಾನಗರಸಭೆಯ ವ್ಯಾಪ್ತಿಯಲ್ಲಿ ಈ ಎಲ್ಲಾ ಕಾರ್ಯಕ್ರಮಗಳನ್ನು ನಡೆಸಬೇಕಾಗುತ್ತದೆ. ಶಾಸಕರಿಗೆ ಕಾನೂನು ಮಾಡುವ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಹಣ ಒದಗಿಸುವ ಹಕ್ಕು ಇರುವಂತೆ ಅಲ್ಲಿಯೂ ಕೂಡಾ ಆ ಭಾಗದ ಶಾಸಕರೆಲ್ಲರೂ ಕೂಡ ಇರಬೇಕಾದ ಅಗತ್ಯ ಇದೆ. ಅವರಿಗೆ ತಕ್ಕ ಸ್ಥಾನ ಮಾನಗಳನ್ನು ಜಿಲ್ಲಾಪರಿಷತ್ತಿನಲ್ಲಿ ಕೊಡಬೇಕಾಗುತ್ತದೆ. ಶಾಸಕರಾದವರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗುವುದಕ್ಕೆ ಅವಕಾಶ ಇರಬೇಕೆಂದು ಅನೇಕ ಶಾಸಕರು ಹೇಳಿದ್ದಾರೆ. ಅದರ ಅವಶ್ಯಕತೆ ಇದೆ. ಶಾಸಕರು ಜಿಲ್ಲಾಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಆಗಬಾರದೆಂದು ಏತಕ್ಕೆ ಕಾನೂನಿನಲ್ಲಿ ಇಡಬೇಕಾಗಿತ್ತು ? ಅಧಿಕಾರ ವಿಕೇಂದ್ರಿಕರಣ ಶಾಸಕರ ಪಾತ್ರ ಬಹಳ ಮುಖ್ಯ ಇದೆ. ಅವರು ಇಲ್ಲಿ ಕಾನೂನು ಮಾಡಿ. ಅಧಿಕಾರವನ್ನು ಜನತೆಗೆ ಮುಟ್ಟಿಸುವಲ್ಲಿ, ಜನತೆಗೆ ಬೇಕಾದ ಕಾರ್ಯಕ್ರಮಗಳನ್ನು ನೇರವಾಗಿ ಮಾಡುವಲ್ಲಿ ಬುದ್ಧಿವಂತಿಕೆಯಿಂದ ಕಾರ್ಯವನ್ನು ಮಾಡಬೇಕಾಗಿತ್ತು. ಈ ಅನುಭವ ಏನಿದೆ ಇದು ಅಲ್ಲಿ ಅವಶ್ಯಕ ಇದೆ. ಶಾಸಕರು ಕೂಡ ಅಲ್ಲಿ ಚುನಾಯಿತರಾಗಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಆಗಬಹುದೆಂದು ಕಾನೂನ್ನು ತರಬೇಕಾಗಿತ್ತು. ಶಾಸಕರಿಗೆ ಯಾವ ರೀತಿಯ ಮರ್ಯಾದೆಯೂ ಇಲ್ಲದಾತೆ ನೋಡಿಕೊಳ್ಳುತ್ತಿದ್ದಾರೆಂದು ಅನೇಕ ಜನ ಶಾಸಕರು ತಮ್ಮ ಅನುಭವದಿಂದ ಹೇಳುತ್ತಿದ್ದಾರೆ. ನಾನು ಜಿಲ್ಲಾ ಪರಿಷತ್ತಿ ಸದಸ್ಯನಾಗಿಲ್ಲದೆ ಇರುವುದರಿಂದ ವೇದನೆಗೆ ಒಳಗಾಗಿಲ್ಲ. ಬಹಳ ಸಂತೋಷದಿಂದ ಇದ್ದೇನೆ. ಇವತ್ತಿನ ದಿನಸ ಅನೇಕ ಮಂದಿ ಸದಸ್ಯರು ನೊಂದುಕೊಳ್ಳುತ್ತಿದ್ದಾರೆ. ಆ ದಿಸೆಯಲ್ಲಿ ಸಮಗ್ರ ತಿದ್ದುಪಡಿಯನ್ನು ತರಬೇಕು. ಮುಖ್ಯವಾಗಿ ನಗರ ಪ್ರದೇಶದ ಶಾಸಕರಿಗೆ ಅಲ್ಲಿ ಅವಕಾಶ ಮಾಡಿಕೊಡಬೇಕು. ಮತ್ತು ಈ ವಿಚಾರವನ್ನು ಇದೇ ಮಸೂದೆಯಲ್ಲಿ ಅಳವಡಿಸಬೇಕೆಂದು ಭಿನ್ನವಿಸಿಕೊಳ್ಳುತ್ತಿದ್ದೇನೆ.

† ಡಾ. ಹೆಚ್. ಎಲ್. ತಿಮ್ಮೇಗೌಡ (ಹುಣಸೂರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಮಂತ್ರಿಗಳು ತಂದಿಸತಕ್ಕ ತಿದ್ದುಪಡಿ ಮಸೂದೆ ಏನಿದೆ ಇದು ಹಿಂಬಾಗಿಲಿನಿಂದ ಎಂ. ಎಲ್.ಎ ಮತ್ತು ಎಂ. ಎಲ್.ಸಿ. ಗಳನ್ನು ಜಿಲ್ಲಾ ಪರಿಷತ್ತಿಗೆ ಅಧ್ಯಕ್ಷರನ್ನಾಗಿ ಮತ್ತು ಉಪಾಧ್ಯಕ್ಷರನ್ನಾಗಿ ಮಾಡಿಕೊಡುವುದಾಗಿದೆ. ಇದೇ ಈ ತಿದ್ದುಪಡಿಯ ಸರಿಯಾದ ಅರ್ಥ. ಜಿಲ್ಲಾಪರಿಷತ್ತಿನ ಆಕ್ಟಿನಲ್ಲಿ ಶಾಸಕರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗುವ ಹಾಗೆ ಇಲ್ಲ. ಈ ಪದವಿಗಳಗೆ ಡಿಸಕಾಲಿಫಿಕೇಷನ್ ಇರಬಾರದು ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಶಾಸಕರ ಸ್ಥಾನಕ್ಕೆ ಸ್ಪರ್ದಿಬಹುದೆಂದು ಆಲೋ ಮಾಡಿದ ಮೇಲೆ ಶಾಸಕರು ಕೂಡ ಅಧ್ಯಕ್ಷರಾಗುವುದಕ್ಕೆ ಉಪಾಧ್ಯಕ್ಷರಾಗುವುಧಕ್ಕೆ ಅವಕಾಶ ಇರುತ್ತದೆ. ಆದುದರಿಂದ ಇದನ್ನು ತಂದು ಹಿಂಬಾಗಿಲನಿಂದ ಶಾಸಕರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಆಗುವುದಕ್ಕೆ ಅವಕಾಶ ಮಾಡಿದ್ದಾರೆ.

೧–೦೦ ಪಿ. ಎಂ.

ಇದು ಸರಿಯಾದ ಉದ್ದೇಶ ಅಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಮೊದಲು ಕಾನೂನು ತಂದಂಥ ಕಾಲದಲ್ಲಿ ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಎಂ. ಎಲ್. ಎ. ಆಗಿರುವವರು ಆಗದೇ ಇರಲಿ, ಅಲ್ಲೇ ಚುನಾಯಿತರಾಗಿರುವವರು ಆ ಸ್ಥಾದಕ್ಕೆ ಬರಲಿ ಎಂಬ ಒಳ್ಳೆಯ ಉದ್ದೇಶದಿಂದ ತರಲಾಗಿತ್ತು. ಈಗ ಎಂ. ಎಲ್. ಎ. ಎಂ. ಎಲ್. ಸಿ.ಗೂ ಕೂಡ ಅವಕಾಶ ಮಾಡುತ್ತೇವೆ ಎಂದರೆ.........

ಶ್ರೀ ಎಂ. ಪಿ. ಪ್ರಕಾಶ್.—ಎಂ. ಎಲ್. ಎ. ಮತ್ತು ಎಂ. ಎಲ್. ಸಿ. ಗಳನ್ನು ಅಧ್ಯಕ್ಷರನ್ನಾಗಿ ಮಾಡುವ ಉದ್ದೇಶ ಕಾನೂನಿನಲ್ಲಿ ಇಲ್ಲ. ತಾವು ತಪ್ಪು ತಿಳಿದುಕೊಂಡಿದ್ದೀರಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಎಂ. ಎಲ್. ಎ. ಸ್ಥಾನಕ್ಕೆ ಚುನಾವಣೆಗೆ ನಿಂತರೆ ಡಿಸ್ಕ್ವಾಲಿಫಿಕೇಷನ್ ಆಗುತ್ತದೆ ಎಂದು ಹಿಂದೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕಾನೂನು ಮಾಡಿತ್ತು. ಈಗ ಆ ಡಿಸ್‌ಕ್ವಾಲಿಫಿಕೇಷನ್ ರಿಮೂವ್ ಮಾಡುತ್ತೇವೆ ಎಂದರೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಎಂ. ಎಲ್. ಎ. ಎಂ. ಎಲ್. ಸಿ. ಆಗಬಹುದು ಎಂದು ಎಂದು ಆಯಿತಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರಾಗಿರುವವರು ಎಂ. ಎಲ್. ಎ. ಆಗಬಹುದು ಎಂದರೆ ಎರಡು ಹುದ್ದೆಗಳಲ್ಲೂ ಮುಂದುವರೆಯಬಹುದು ಎಂದು ಆಯಿತಲ್ಲ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಡಿಸ್‌ಕ್ವಾಲಿಫಿಕೇಷನ್ ರಿಮೂವ್ ಮಾಡಿದ ತಕ್ಷಣ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಎಂ. ಎಲ್. ಎ. ಸ್ಥಾನಕ್ಕೆ ನಿಲ್ಲಬಹುದು, ನಿಂತಮೇಲೆ ಎರಡೂ ಕಡೆಯೂ ಕಂಟಿನ್ಯೂ ಆಗಬಹುದು ಅಂತ ಆಗುತ್ತದೆ. ಎಂ. ಎಲ್. ಎ.ಗಳು ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಆಗಬಾರದು ಎಂಬ ಸಮಸ್ಯೆ ಆಟೋಮೆಟಿಕ್ಕಾಗಿ ಹೋಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್.—ಅವರು ರಾಜೀನಾಮೆ ಕೊಡಬೇಕಾಗುಗುತ್ತದೆ.

ಡಾ॥ ಎಚ್. ಎಲ್. ತಿಮ್ಮೇಗೌಡ.—ಅದಿಲ್ಲ, ಇಲ್ಲಿ. ಅದನ್ನು ತನ್ನಿ, ಒಪ್ಪಿಕೊಳ್ಳೋಣ, ರಾಜೀನಾಮೆ ಕೊಡಬೇಕು ಎಂಬುದನ್ನು ಸೇರಿಸಿದರೆ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬಹುದು. ಇಲ್ಲದಿದ್ದರೆ ರಾಜಕೀಯ ಉದ್ದೇಶದಿಂದ ಕೆಲವು ಎಂ. ಎಲ್. ಎ. ಮತ್ತು ಎಂ. ಎಲ್. ಸಿ. ಗಳನ್ನು ಈಗಿರತಕ್ಕ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಂದ ರಾಜೀನಾಮೆ ಕೊಡಿಸಿ ಅವರನ್ನು ಆ ಸ್ಥಾನದಲ್ಲಿ ಕೂಡಿಸುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದಾರೆ ಎಂದು ಸಾರ್ವಜನಿಕರಲ್ಲಿ ಸಂಶಯ ಬರುತ್ತದೆ. ಆ ಬಗ್ಗೆ ಉತ್ತರ ಹೇಳುವುದಕ್ಕೂ ಕೂಡ ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳು ಆ ಉದ್ದೇಶದಿಂದ ಮಾಡಿಲ್ಲ ಎಂದು ಹೇಳುತ್ತಾರೆ. ಸಾರ್ವಜನಿಕರ ಮುಂದೆ ಅದನ್ನು ಸಾಬೀತು ಮಾಡಬೇಕಾದರೆ ಇವರು ಚುನಾಯಿತರಾದರೆ ಆ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಗುತ್ತದೆ. ಎಂಬುದನ್ನು ಈ ಮಸೂದೆಯಲ್ಲಿ ಸೇರಿಸಬೇಕು. ಆಗ ಇದನ್ನು ನಂಬಬಹುದು. ಆದ್ದರಿಂದ ದಯಮಾಡಿ ಇದನ್ನು ಈಗ ಪಾಸ್ ಮಾಡುವುದು ಬೇಡ ಹಾಗೇ ನಿಲ್ಲಿಸಿ. ಮುಂದಿನ ಮಾರ್ಚ್ 30ನೇ ತಾರೀಖು ಅಸೆಂಬ್ಲಿ ಚುನಾವಣೆಯಾಗುತ್ತದೆ. ಇನ್ನೂ ಒಂದು ವರ್ಷ ಇದೆ. ಮುಂದೆ ಬಜೆಟ್ ಸೆಷನ್ ನೆಡಿಯುವ ಕಾಲದಲ್ಲಿ ಎಲ್ಲವನ್ನೂ ಸೇರಿಸಿ ಒಂದು ಸಮಗ್ರವಾದ ಮಸೂದೆ ತನ್ನಿ. ಎಲೆಕ್ಟ್ ಆದರೆ ಒಂದು ಕಡೆ ರಾಜೀನಾಮೆ ಕೊಡಬೇಕಾಗುತ್ತದೆ. ಎಂಬುದನ್ನು ಸೇರಿಸಿ ತನ್ನಿ, ಆಗ ಇದನ್ನು ಮಂಜೂರು ಮಾಡೋಣ. ಇನ್ನೂ ಹಲವಾರು ಅಮೆಂಡ್‌ಮೆಂಟ್‌ಗಳು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಆಕ್ಟ್‌ಗೆ ಮಾಡಬೇಕಾಗಿದೆ. ಪ್ರಧಾನರು ೩೦, ೪೦ ಸಾವಿರ ಮಿಸ್ ಅಪ್ರೋಪ್ರಿಯೇಷನ್ ಮಾಡಿದರೂ ಅವರನ್ನು ರಿಮೂವ್ ಮಾಡುವುದಕ್ಕೆ ಪ್ರಾವಿಷನ್ ಇಲ್ಲ. ಅದರ ಬಗ್ಗೆ ಕೂಡ ತಿದ್ದುಪಡಿ ಮಾಡಬೇಕಾಗುತ್ತದೆ. ಮೊದಲೇ ಕಾನೂನಿನಲ್ಲಿ ಎಲ್ಲಾ ಯೋಚನೆ ಮಾಡಿ ಪ್ರಾವಿಷನ್ ಮಾಡಬೇಕಾಗಿತ್ತು ಎಂದು ಹೇಳುವುದು ಸರಿಯಾದುದಲ್ಲ. ತಪ್ಪುಗಳು ಗೊತ್ತಾದಾಗ ಅದನ್ನು ಅಮೆಂಡ್ ಮಾಡುವ ಅವಶ್ಯಕತೆ ಇದೆ. ಇದರಲ್ಲಿ ಅನೇಕ ಸಮಸ್ಯೆಗಳಿವೆ. ಎಲ್ಲವನ್ನೂ ಸೇರಿಸಿ ಸಮಗ್ರವಾದ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ. ಸಾರ್ವಜನಿಕರಲ್ಲಿರುವ ಸಂಶಯವನ್ನು ನಿವಾರಣೆ ಮಾಡಬೇಕಾದರೆ ಈ ತಿದ್ದುಪಡಿ ಮಸೂದೆಯನ್ನು ವಾಪಸ್ ತೆಗೆದುಕೊಂಡು ಸಮಗ್ರವಾದ ತಿದ್ದುಪಡಿ ಮಸೂದೆಯನ್ನು ಮಾನ್ಯ ಕಾನೂನು ಮಂತ್ರಿಗಳು ತರಬೇಕು. ಕಾನೂನು ಮಂತ್ರಿಗಳು ತಿಮ್ಮೇಗೌಡರು ಹೇಳಿದ ತಕ್ಷಣ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ನಾನು ಮೊನ್ನೆ ಒಂದು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಬಜೆಟ್ ಪೂರ್ತಿ ಒಪ್ಪಿಗೆಯಾಗುವವರೆಗೆ ಫೈನಾನ್ಸ್ ಬಿಲ್ ತರಬಾರದು ಎಂದು ಹೇಳಿದ್ದೆ. ಆಗ ನಾನು ಹೇಳಿದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳಿದರು. ಮೊನ್ನೆ ತಮ್ಮ ಛೇಂಬರ್‌ನಲ್ಲಿ ಅವರಿಗೆ ಸರ್ವಜ್ಞ ಮೂರ್ತಿ ಎಂಬ ಟೈಟಲ್ ಕೂಡ ಕೊಟ್ಟಿದ್ದಾರೆ. ಫೈನಾನ್ಸ್ ಬಿಲ್ ಬಗ್ಗೆ ಕೌಲ್ ಅಂಡ್ ಶಕ್ದರ್‌ನಲ್ಲಿ ಈ ರೀತಿ ಹೇಳಿದ್ದಾರೆ.

> "The finance Bills comming as new taxation proposals can be considered and passed only after the demands for grants have been voted and the total expenditure is known-"

ಎನ್ನುವ ಇದೇ ವಿಚಾರವನ್ನು ಹೇಳಿದಾಗ ನೀವು ಹೇಳಿದ್ದನ್ನೆಲ್ಲಾ ಸರಿ ಎಂದು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಎಂದು ಕಾನೂನು ಮಂತ್ರಿಗಳು ಹೇಳಿದರು.

ಅಧ್ಯಕ್ಷರು.- ನೀವು ತಿದ್ದುಪಡಿಯನ್ನು ಅಪೋಸ್ ಮಾಡುತ್ತೀರೋ ಸಪೋರ್ಟ್ ಮಾಡುತ್ತೀರೋ ಹೇಳಿ.

ಡಾ|| ಎಚ್. ಎಲ್. ತಿಮ್ಮೇಗೌಡ.- ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಈ ಬಗ್ಗೆ ಕಾನೂನನ್ನು ಸಮಗ್ರವಾಗಿ ಬದಲಾವಣೆ ಮಾಡತಕ್ಕ ಅಮೆಂಡ್‌ಮೆಂಟ್ ತರಲಿ, ಆಗ ಇದನ್ನು ಒಪ್ಪಿಕೊಳ್ಳೋಣ, ಈಗ ದಯವಿಟ್ಟು ವಾಪಸ್ ತೆಗೆದುಕೊಳ್ಳಿ ಎಂದು ಹೇಳುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಮಂತ್ರಿಗಳು ಬಹಳ ಅವಸರ ಅವಸರವಾಗಿ ಈ ಒಂದು ತಿದ್ದುಪಡಿ ಬಿಲ್ಲನ್ನು ತೆಗೆದುಕೊಂಡು ಬಂದಿದ್ದಾರೆ. ಇದರಿಂದ ಪ್ರಯೋಜನವೇನು ಎಂಬುದು ನನಗೆ ಅರ್ಥವಾಗಲಿಲ್ಲ. ಕಾರಣವೇನೆಂದರೆ, ಇದಕ್ಕೆ ಸಮಗ್ರವಾಗಿ ತಿದ್ದುಪಡಿಗಳನ್ನು ತರಬೇಕಾಗಿತ್ತು. ಏಕೆಂದರೆ ಬಹಳ ಅವಸರ ಅವಸರವಾಗಿ ಕಾನೂನನ್ನು ಮಾಡಿದ್ದೇವೆಂದು ದಿವಂಗತ ಗೌರವಾನ್ವಿತ ನಜೀರ್‌ಸಾಬ್ ಅವರು ಹೇಳಿದ್ದರು. ಇಲ್ಲಿ ಅವಸರ ಅವಸರವಾಗಿ ಮಾಡಿದ್ದೇವೆ. ಸಮಗ್ರವಾಗಿ ತಿದ್ದುಪಡಿಗಳನ್ನು ತರುತ್ತೇವೆಂದು ಕಳೆದ ಸಾರಿಯ ಅಧಿವೇಶನ ನಡೆಯುವುದಕ್ಕಿಂತ ಹಿಂದೆ ನಡೆದಂತಹ ಅಧಿವೇಶನದಲ್ಲಿ ಹೇಳಿದ್ದರು. ಈಗ ಅದೇ ಪ್ರಕಾರ ಮೂಲ ಕಾಯಿದೆಯ ಸೆಕ್ಷನ್ ೧೪೩ರ ಬಗ್ಗೆ ಮಾತನಾಡುವುದಾದರೆ, ಅದರ ಪ್ರಕಾರ ಮೀಸಲಾತಿಯ ಸೀಟುಗಳನ್ನು ಎಸ್. ಸಿ. ಹಾಗೂ ಎಸ್. ಟಿ. ಜನರಿಗೆ ಜಿಲ್ಲಾಪರಿಷತ್ತಿನಲ್ಲಿ ಕೊಡಬೇಕಾಗಿದೆ.

> "Seats shall be reserved in a Zilla parishad for the scheduled castes and scheduled tribes and the number of seates reserved shall bear as many as may be the same proportion to the total number of elected members in a Zilla parishad as the population of the scheduled castes and scheduled tribes in the district bears to the total population of the district."

ಎಲ್ಲಿ ಯಾವ ಈ ಜನರ ಜನಸಂಖ್ಯೆ ಜಾಸ್ತಿ ಇದೆಯೋ ಅಲ್ಲಿ ಅವರಿಗೆ ಸೀಟುಗಳನ್ನು ಮೀಸಲಾಗಿಟ್ಟು ಅವರಿಗೇ ಆ ಸೀಟುಗಳನ್ನು ಕೊಡಬೇಕು. ಜಿಲ್ಲಾ ಪರಿಷತ್ತಿನ ಚುನಾವಣೆಯೂ ನಡೆಯಿತು, ಮಂಡಲ್ ಪಂಚಾಯ್ತಿಯ ಚುನಾವಣೆಯೂ ನಡೆಯಿತು. ಚುನಾವಣೆಯಲ್ಲಿ ಏನಾಗಿದೆ ಎಂದರೆ ಯಾವ ಎಸ್. ಸಿ. ಜನರಿಗೆ ಸೀಟ್‌ಗಳನ್ನು ಕೊಡಬೇಕಾಗಿತ್ತೋ ಅಲ್ಲೆಲ್ಲಾ ಎಸ್. ಟಿ. ಎಂದು ಹೇಳಿಬಿಟ್ಟು ಹೊಸದಾಗಿ ಸೇರಿಸಲಾದ ಪಟ್ಟಿಯಲ್ಲಿರತಕ್ಕ ಬೇಡರು, ಕುರುಂಬರು ಏನು ಇದ್ದಾರೆ, ಇವರನ್ನೆಲ್ಲಾ ಕಾಡು ಕುರುಬರು ಎಂದು ಮಾಡಿ, ಜೇನು ಕುರುಬರು ಎಂದು ಮಾಡಿ ಇವರಿಗೆಲ್ಲಾ ಪೊಲಿಟಿಕಲ್ ಆಗಿ ಮೀಸಲಾತಿ ಕೊಟ್ಟು, ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆ ಸುಮಾರು ಮುಕ್ಕಾಲು ಭಾಗ ಮೀಸಲಾತಿ ಕ್ಷೇತ್ರದಲ್ಲಿ ಇವರೇ ಗೆದ್ದು ಬಂದಿದ್ದಾರೆ. ಅವರೇ ಇವತ್ತು ಅಧಿಕಾರವನ್ನು ಮಾಡುತ್ತಿದ್ದಾರೆ. ಆದರೆ ಅವರು ಎಲ್ಲಿ ಹೆಚ್ಚು ಜನಸಂಖ್ಯೆ ಇದ್ದಾರೆ, ಅಲ್ಲಿಗೆ ಮೀಸಲಾತಿ ಮಾಡಬೇಕಾಗಿತ್ತು. ಎಲ್ಲಿ ಎಸ್.ಸಿ. ಜನಸಂಖ್ಯೆ ಜಾಸ್ತಿ ಇದೆಯೋ ಅಲ್ಲಿ ಆ ಜನರಿಗಾಗಿಯೇ ಮೀಸಲಾತಿ ಮಾಡಬೇಕಾಗುತ್ತದೆ. ಆದರೆ ಎಸ್.ಸಿ. ಜನರಿಗಾಗಿ ಮೀಸಲಿಟ್ಟಿರುವಂತಹ ಜಾಗದಲ್ಲಿ ಎಸ್.ಟಿ. ಯವರು ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ನೀವು ಎಸ್.ಸಿ. ಅಂಡ್ ಎಸ್.ಟಿ. ಅಂತ ಮಾಡಿ ಇವೆರಡೂ ಒಂದೇ ಎಂದು ಹೇಳಿರುವುದರಿಂದ ಈ ರೀತಿಯ ತೊಂದರೆಗಳಾಗಿವೆ. ಇದರ ಬಗ್ಗೆ ಈ ಹಿಂದೆ ಸಾಕಷ್ಟು ಸಾರಿ ಇಲ್ಲಿ ಚರ್ಚೆಯಾಗಿದೆ. ಇದಕ್ಕೆ ತಾವೇ ಸಾಕ್ಷಿಯಿದ್ದೀರಿ. ನಜೀರ್‌ಸಾಬ್ ರವರು ಅಲ್ಲಿ ಕುಳಿತುಕೊಂಡು ಇಲ್ಲ ನಾವು ತಪ್ಪು ಮಾಡಿದ್ದೇವೆ. ಮುಂದಿನ ಸಭೆಯಲ್ಲಿ ಆ ಬಗ್ಗೆ ತಿದ್ದುಪಡಿಯನ್ನು ತೆಗೆದುಕೊಂಡು ಬರುತ್ತೇವೆ ಎನ್ನುವ ಮಾತನ್ನು ಹೇಳಿದರು. ತಮಗೂ ಗಮನ ಇರಬಹುದು. ನಾನು ಅದನ್ನು ತೆಗೆದುಕೊಂಡು ಬರುವುದನ್ನು ಮರೆತುಬಿಟ್ಟೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಹೇಳುವುದೇನೆಂದರೆ, ಬಹಳ ಅವಸರ ಅವಸರವಾಗಿ ಕೆಲಸ ಮಾಡುವುದಕ್ಕೆ ಹೋಗಬೇಡಿ. ಅವಸರ ಅವಸರವಾಗಿ ಕೆಲಸ ಮಾಡುವುದಕ್ಕೆ ಹೋದಾಗ ಈ ರೀತಿಯ ನ್ಯೂನತೆಗಳು ಆಗುತ್ತವೆ, ದಯಮಾಡಿ ಈ ಬಗ್ಗೆ ಎಲ್ಲಾ ಯೋಚನೆ ಮಾಡಿ ಸಮಗ್ರವಾದ ತಿದ್ದುಪಡಿಯನ್ನು ಮುಂದಿನ ಸಾರಿ ತೆಗೆದುಕೊಂಡು ಬನ್ನಿ. ಅಥವಾ ಈಗಲೇ ಆ ಬಗ್ಗೆ ತಿದ್ದುಪಡಿಯನ್ನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸರ್ಕಾರದವರೇ ತಂದರೆ ಬಹಳ ಸಂತೋಷ. ಎಸ್.ಸಿ. ಯವರ ಕ್ಷೇತ್ರವೇ ಬೇರೆ. ಎಸ್.ಟಿ. ಯವರ ಕ್ಷೇತ್ರವೇ ಬೇರೆ ಎಂಬುದಾಗಿ ತಿದ್ದುಪಡಿಯನ್ನು ತೆಗೆದುಕೊಂಡು ಬಂದರೆ ನಾನು ಬಹಳ ಸಂತೋಷ ಪಡುತ್ತೇನೆ. ಈ ಬಗ್ಗೆ ಮಾನ್ಯ ಶ್ರೀ ಮಲ್ಲಿಕಾರ್ಜುನ್ ಖರ್ಗೆಯವರು ಸಾಕಷ್ಟು ಹೇಳಿದ್ದಾರೆ. ಆ ಬಗ್ಗೆ ಖಾಸಗಿ ಸದಸ್ಯರ ನಿರ್ಣಯವನ್ನೂ ಕೂಡ ತಂದಿದ್ದಾರೆ. ಆ ಬಗ್ಗೆ ತಿದ್ದುಪಡಿಯನ್ನು ತರಬೇಕು. ಪ್ರಸ್ತುತ ತಿದ್ದುಪಡಿ ಬಿಲ್ಲು ಏನು ಇದೆ, ಅದು ಅನವಶ್ಯಕವಾಗಿದೆ ಎಂಬುದು ನನ್ನ ಭಾವನೆ. ಕಾರಣವೇನೆಂದರೆ, ಜಿಲ್ಲಾ ಪರಿಷತ್ತಿಗೆ ಮತ್ತು ಇನ್ಯಾರಿಗೋ ಪದನಿಮಿತ್ತ ಸದಸ್ಯರನ್ನಾಗಿ ಮಾಡುವುದಕ್ಕೆ ಈ ನಿಯಮವನ್ನು ಮಾಡಿದ್ದೀರೆಯೋ ವಿನಃ ಬೇರೆ ಏನೂ ಅಲ್ಲ. ಕಾನೂನಿನಲ್ಲಿ ಎಂ, ಎಲ್. ಎ. ಗಳೂ ಅಲ್ಲಿ ಅಧ್ಯಕ್ಷರಾಗಬಹುದು, ಉಪಾಧ್ಯಕ್ಷರಾಗಬಹುದು ಅಂತದ್ದೇ ಇಲ್ಲಿರುವಂತಹದ್ದು. ಆದರೆ ಇಲ್ಲಿ ತಂದಿರತಕ್ಕಂತಹ ಇವರ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್ ಅಂಡ್ ರೀಸನ್‌ನಲ್ಲಿ ಏನು ಹೇಳುತ್ತಾರೆಂದರೆ :

> "It was considered necessary to amend the Karnataka Legislature (Prevention of Disqualification) Act, 1956 to declare that the office of the Adhyaksha and Upadhyaksha of the Zilla Parishads constituted under the Karnataka Zilla Parishads, Taluk Panchayat Samithis, Mandal Panchayots and Nyaya Panchayats Act, 1983 (Karnataka Act 20 of 1985) shall not disqualify and shall be deemed never to have disqualified a person for being chosen as or for being a member of the Karnataka Legislative Assembly of the Karnataka Legislative Council." ಎಂದು.

ಇದರ ಅವಶ್ಯಕತೆ ಏನಿತ್ತು? ಕಾನೂನು ಮಂತ್ರಿಗಳ ಪ್ರಕಾರ ಇದು ನ್ಯಾಯ ಇರಬಹುದು. ಇದರ ಅವಶ್ಯಕತೆ ಏನು? ಅವಸರದ ಅವಶ್ಯಕತೆ ಯಾವುದು? ಇದರಿಂದ ಸರ್ಕಾರಕ್ಕೆ ಆಗತಕ್ಕ ನಷ್ಟ ಯಾವುದು, ಲುಕ್ಸಾನು ಯಾವುದು? ಡಿಸ್‌ಕ್ವಾಲಿಫೈ ಯಾರು ಯಾರು ಆಗುತ್ತಿದ್ದರು? ಇದರ ಬಗ್ಗೆ ಸ್ವಲ್ಪ ಸಮಗ್ರವಾಗಿ......

ಅಧ್ಯಕ್ಷರು.—ತಾವು ಕನ್‌ಕ್ಲೂಡ್ ಮಾಡಿ.

ಶ್ರೀ ಬಿ. ಬಸವಲಿಂಗಪ್ಪ.—ಇದನ್ನು ವಾಪಸ್ಸು ತೆಗೆದುಕೊಂಡು ಸಮಗ್ರವಾದ ತಿದ್ದುಪಡಿಯನ್ನು ತರಬೇಕು. ಲಕ್ಷ್ಮೀಸಾಗರ್ ಅವರೇ ಸ್ವಲ್ಪ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮಂತ್ರಿಗಳು ಸದಸ್ಯರ ಸಲಹೆಗಳನ್ನು ಕೇಳಲಿ.

ಪ್ರೊ|| ಎ. ಲಕ್ಷ್ಮೀಸಾಗರ್.—ಇದನ್ನು ಅವಶ್ಯಕವಾಗಿ ತಂದಿರತಕ್ಕದ್ದು ಅವಶ್ಯಕತೆ ಇಲ್ಲ ಎಂದು ಅವರು ಹೇಳುತ್ತಿದ್ದಾರೆ. ಅವಸರದ ಹಾಗೂ ಅವಶ್ಯಕತೆಯಿಲ್ಲವೆಂದು ಅವರು ಹೇಳಿದ್ದನ್ನು ನಾನು ಬರೆದುಕೊಂಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಈ ದೇಶದಲ್ಲಿ ನಾವು ಬೆಳೆದಿದ್ದೇವೆ. ನಮಗೆ ಯಾರೊಬ್ಬರೇ ಆಗಲಿ, ವಿರೋಧ ಪಕ್ಷದವರೇ ಆಗಲೀ ಇತರೇ ಪಕ್ಷದವರೇ ಆಗಲೀ ಏನಾದರೂ ಬುದ್ಧಿವಾದ ಹೇಳಿದರೆ ನಾವು ಕಿವಿಗೊಟ್ಟು ಕೇಳುವ ಸದ್ಬುದ್ಧಿ ನಮಗೆ ಇತ್ತು. ಈಗ ಅದು ಮಾಯವಾಗಿದೆ. ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳಿದ್ದೇ ಹೇಳಿದ್ದು, ಕೇಳಿದ್ದೇ ಕೇಳಿದ್ದು. ಏನೊಂದು ಹಠಮಾರಿತನ ಅವರಲ್ಲಿ ಇದೆ ಅದು ರಾಜಕೀಯ ಜೀವನದಲ್ಲಿ ಇರಬಾರದು. ಹಠಮಾರಿತನ ನಿಮಗೂ ಇರಬಾರದು, ನಮಗೂ ಇರಬಾರದು ಅಲ್ಲವೇ ಅಧ್ಯಕ್ಷರೇ? ನಾವೆಲ್ಲರೂ ಏನೂ ಅತಿ ಬುದ್ಧಿವಂತರಲ್ಲ. ಅರಿವನ್ನು ನಾವು ಕೆಲವರಿಂದ ಕಲಿತುಕೊಳ್ಳಬೇಕಾಗುತ್ತದೆ. ಅರಿವನ್ನು ಒರೆಹಚ್ಚಿ ನಾವು ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ. ನಿಮಗೆ ಅರಿವನ್ನು ಬೇಕಾದರೆ ಸಾಲವಾಗಿ ನಾವು ಕೊಡುತ್ತೇವೆ. ಅದನ್ನು ನಿಮ್ಮ ಅರಿವಿಗೆ ಅಳವಡಿಸಿಕೊಳ್ಳಬೇಕು. ನಾನು ಕನ್ನಡ ಸಾಹಿತ್ಯದ ಆಧಾರದ ಮೇಲೆ ಮಾತನಾಡ

ತ್ತಿದ್ದೇನೆ. ನಮ್ಮ ಅರಿವನ್ನು ನಿಮ್ಮ ಅರಿವನ್ನೂ .....

ಶ್ರೀ ಜಿ. ನಾರಾಯಣ ಕುಮಾರ್.—ಅವತ್ತು ಕನ್ನಡ ಸಾಹಿತ್ಯವನ್ನು ನೀವು ಭೂಸಾ ಸಾಹಿತ್ಯ ಎಂದು ಹೇಳಿದಿರಿ.

ಶ್ರೀ ಬಿ. ಬಸವಲಿಂಗಪ್ಪ.—ಈ ಬಗ್ಗೆ ನಿಮಗೆ ಎಷ್ಟು ತಿಳಿದಿದೆಯೋ ಅಷ್ಟೇ ನಮಗೂ ತಿಳಿದಿರುವುದು. ಅವರಿಗೆ ಏನು ಹೇಳಿಕೊಡುತ್ತಿದ್ದೀರಿ ಲಕ್ಷ್ಮೀಸಾಗರ್ ಅವರೇ? This is very indecent. To talk to a person who does not depend on himself. He is talking to Mr. Narayanakumar..

ಅಧ್ಯಕ್ಷರು.—ನೀವು ಮತ್ತು ನಾರಾಯಣಕುಮಾರ್ ಅವರು ಹಾವು ಮತ್ತು ಮುಂಗುಸಿ ಇದ್ದಹಾಗೆ.

ಶ್ರೀ ಬಿ. ಬಸವಲಿಂಗಪ್ಪ.—ನಾರಾಯಣ ಕುಮಾರ್ ಅವರು ನನ್ನ ಪ್ರೀತಿಯ ಒಬ್ಬ ಸ್ನೇಹಿತ. ಅವರಿಗೆ ನನಗೆ ಏನೂ ಇಲ್ಲ. ಅವರು ತಪ್ಪು ಮಾಡಿದಾಗ ಅದನ್ನು ನಾನು ಕನಿಕರದಿಂದ ಒಪ್ಪುತ್ತೇನೆಯೇ ಹೊರತು ಸಿಟ್ಟಿನಿಂದ ನೋಡುವುದಿಲ್ಲ. ಈಗ ಲಕ್ಷ್ಮೀಸಾಗರ್ ಅವರಿಗೆ ನಾನು ಹೇಳುವುದೇನೆಂದರೆ, ದಯಮಾಡಿ ಸಮಗ್ರವಾಗಿ ಇದಕ್ಕೆ ತಿದ್ದುಪಡಿ ತೆಗೆದುಕೊಂಡು ಬನ್ನಿ ಎಂದು. ಆ ರೀತಿಯ ತಿದ್ದುಪಡಿ ತಂದು ನಮಗೆಲ್ಲಾ ಸಮಾಧಾನ ಮಾಡಿ ನಿಮಗೂ ಸಮಾಧಾನ ಮಾಡಿಕೊಳ್ಳಿ ಎಂದು ಹೇಳುತ್ತೇನೆ.

† ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಇದು ಬಹಳ ಸರಳವಾದುದಾದರೂ ಆರ್ಡಿನೆನ್ಸ್ ಮೂಲಕ ಇದನ್ನು ತಂದಿದ್ದಾರೆ. ನಾನು ಈಗ ಒಂದು ಮಾತನ್ನು ಸರ್ಕಾರಕ್ಕೆ ಹೇಳುತ್ತೇನೆ. ಇವತ್ತು ನಿಮಗೆ ಬೇಕಿದ್ದರ ಬಗ್ಗೆ ಕಾನೂನು ಮಾಡುವುದಕ್ಕೆ ನಿಮಗೆ ಪುರುಸೊತ್ತು ಇಲ್ಲ. ಬೇಡದೇ ಇದ್ದ ಕಾನೂನನ್ನು ಅವಸರ ಅವಸರವಾಗಿ ಆರ್ಡಿನೆನ್ಸ್ ಮೂಲಕ ಮಾಡುವುದಕ್ಕೆ ಸಾಕಷ್ಟು ಸಮಯ ನಿಮಗೆ ಇದೆ. ನಗರಸಭೆಯ ವ್ಯಾಪ್ತಿಯಲ್ಲಿರುವ ರೆವಿನ್ಯೂ ಭೂಮಿಯಲ್ಲಿ ಈಗಾಗಲೇ ಮನೆ ಕಟ್ಟಿ ಬಡಾವಣೆ ಮಾಡಿದ್ದು ಅಲ್ಲಿ ಖಾತೆ ಮಾಡುವ ಬಗ್ಗೆ ಕಾನೂನು ಇಲ್ಲ. ಆ ಬಗ್ಗೆ ಕಾನೂನು ಮಾಡುವ ತ್ವರಿತತೆ ಇದೆ. ಮಾನ್ಯ ಚಂದ್ರಶೇಖರ್ ಅವರೂ ಇಲ್ಲಿಯೇ ಇದ್ದಾರೆ. ಅದೇನೋ ೫–೬ ಆಕ್ಟ್‌ಗಳ ಸಮಾಗಮ ಮಾಡಬೇಕೆಂದು ಹೋದಸಾರಿ ಅವರು ಹೇಳಿದ್ದರು. You educated me on that and took to education portfolio. ನಿಜವಾಗಿಯೂ ಇವತ್ತು ಯಾವುದು ನಮಗೆ ತಲೆ ಹೋಗುವ ಪ್ರಶ್ನೆ? ನನ್ನದೇ ಒಂದು ಮುನಿಸಿಪಾಲಿಟಿಗೆ ೧ ವಾರದಲ್ಲಿ ೧ ಕೋಟಿ ರೂಪಾಯಿಗಳ ಪರಮಾನ ಒಂದು ತಿದ್ದುಪಡಿಯನ್ನು ಮಾಡುವುದರಿಂದ ಬರುತ್ತದೆ. ಒಂದು ವರ್ಷಕ್ಕೆ ೧೬ ಲಕ್ಷ ರೂಪಾಯಿಗಳಷ್ಟು ರೆಕರಿಂಗ್ ಇನ್‌ಕಂ ಇದೆ. ಅದಕ್ಕೆ ಕಾನೂನು ಮಾಡಿ ಅಂದರೆ ನಿಮಗೆ ಪುರುಸೊತ್ತು ಇಲ್ಲ. ಆ ಕಾನೂನು ಹೀಗಿದೆ, ಈ ಕಾನೂನು ಹಾಗಿದೆ ಎಂದು ಹೇಳಿ ಕಾಲ ಕಳೆಯುತ್ತಿದ್ದೀರಿ. ಕಾನೂನು ಯಾವುದು ಜರೂರಾಗಿ ಬೇಕೋ ಅದನ್ನು ಮಾಡುವುದಿಲ್ಲ. ಈ ತಿದ್ದುಪಡಿಯ ತಾತ್ಪರ್ಯವಾದರೂ ಏನು? ಬರೀ ಡಿಸ್‌ಕ್ವಾಲಿಫಿಕೇಷನ್ ಬಗ್ಗೆ. ಇದು ಸದನಕ್ಕೆ ಸಂಬಂಧಪಟ್ಟಿರತಕ್ಕದ್ದು. ಹಾಗೆ ಸರ್ಕಾರ ನಮ್ಮ ಮಧ್ಯೆ ಇರತಕ್ಕ ವಿಚಾರವಲ್ಲ. ರಾಜ್ಯಾಂಗದ ೧೦೨ ಮತ್ತು ೧೯೧ನೇ ಈ ವಿಧಿಗಳು ಯಾವುದೇ ಮನುಷ್ಯ ಅಲ್ಲಿನ ಸರ್ಕಾರದ ಕೈಕೆಳಗೆ, ಹೇಳಬಹುದಾದ ಯಾವುದೇ ಲಾಭದಾಯಕ ಹುದ್ದೆಯಲ್ಲಿದ್ದರೆ ಅಂತಹವನು ಆಯಾಯ ಸದನದ ಸದಸ್ಯತ್ವವನ್ನು ಕಳೆದುಕೊಳ್ಳುತ್ತಾನೆ, ಅನರ್ಹನಾಗುತ್ತಾನೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ತದನಂತರ ರಾಜ್ಯಾಂಗದಲ್ಲಿ ಇನ್ನೊಂದು ಅವಕಾಶವನ್ನು ಏನು ಕೊಟ್ಟಿದ್ದಾರೆಂದರೆ both to the Parliament and also to the State Legislature to declare certain offices as not coming under the disqualification. ಇದು ಏನೆಂದರೆ ರಾಜ್ಯಾಂಗದಲ್ಲಿ ಹೇಳಿರತಕ್ಕದ್ದು disqualification should be a rule. Whatever we do must be in the nature of exception. ಇದು ಹೋಗುತ್ತಾ ಹೋಗುತ್ತಾ ಏನಾಗಿದೆ ಅಂದರೆ we are making an ass of the provision of the Constitution. We have no business to do it as a Legislature. What is its real purpose– ರಾಜ್ಯಾಂಗದಲ್ಲಿನ ಆಶಯ ಏನಿದೆ? The purpose is......

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

I am reading from the Commentary of the Constitution of India:

> "The object of this later article is to maintain the independence of members of Legislature from any sort of Government control or influence. When therefore the Government has a say in the matter of appointment or removal of a person, he should not be allowed to sit in the Legislature even though by such an appointment the relationship of master and servant is not constituted between such person and the Government."

ಅಂದರೆ ನಾವು ಇಲ್ಲಿ ಪ್ರಿವಿಲೇಜ್ ಬಗ್ಗೆ ಮಾತನಾಡುತ್ತೇವೆ, ನಾವು ಇಲ್ಲಿ ಯಾರ ಬಗ್ಗೆ ಏನೇ ಮಾತನಾಡಿದರೂ ಯಾರೂ ನಮ್ಮನ್ನು ಕೋರ್ಟ್‌ನಲ್ಲಿ ಪ್ರಶ್ನೆ ಮಾಡುವ ಹಾಗೆ ಇಲ್ಲ. ಅದೇರೀತಿ ಒಬ್ಬ ಸದಸ್ಯ ಯಾವುದೇ ಲಾಭದಾಯಕ ಹುದ್ದೆಯಲ್ಲಿದ್ದ ಪಕ್ಷದಲ್ಲಿ ಅವನು ಇಲ್ಲಿ ಕೆಲಸ ಮಾಡುವುದಕ್ಕೆ ಬೇಕಾಗತಕ್ಕ ಮಾನಸಿಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾನೆ, ಆದಕ್ಕೋಸ್ಕರ ಅದಕ್ಕೆ ಅವಕಾಶ ಇರಕೂಡದು, ಇದು ರಾಜ್ಯಾಂಗದ ವಿಧಿಗಳ ಹಿಂದೆ ಇಂತಕ್ಕ ಒಂದು ಆಶಯವಾಗಿದೆ. ರಾಜ್ಯಾಂಗದ ವಿಧಿ ೧೦೨ ಮತ್ತು ೧೯೧ ಎರಡೂ ಕಡೆಗಳಲ್ಲಿ ಪಾರ್ಲಿಮೆಂಟ್‌ಗೆ ಸಂಬಂಧಪಟ್ಟ ಹಾಗೆ ಹೇಳಿದ್ದಾರೆ. ರಾಜ್ಯಗಳ ಲೆಜಿಸ್ಲೆಚರ್‌ಗೆ ಸಂಬಂಧಪಟ್ಟ ಹಾಗೆಯೂ ಹೇಳಿದ್ದಾರೆ. ಆ ಕಾನೂನಿನ ಮುಖಾಂತರ ಜಿಲ್ಲಾ ಪರಿಷತ್‌ನ ಮತ್ತು ಮಂಡಲ ಪಂಚಾಯಿತಿಯ ಅಧ್ಯಕ್ಷರು ವಿಧಾನಸಭೆ ಮತ್ತು ವಿಧಾನಪರಿಷತ್ ಎರಡೂ ಸದನದ ಸದಸ್ಯರಾಗಿ ಮುಂದುವರಿಯಬಹುದು. ಒಂದು ಕಡೆ ಇದ್ದರೆ ಇನ್ನೊಂದನ್ನು ಬಿಡಬೇಕೆಂದು ಇಲ್ಲ. ಒಬ್ಬರು ಒಂದು ಸಾರಿ ಜಿಲ್ಲಾ ಪರಿಷತ್ ಅಧ್ಯಕ್ಷನಾದ ಮೇಲೆ ಚುನಾವಣೆಯಲ್ಲಿ ಕಂಟೆಸ್ಟ್ ಮಾಡಿ ಎಂ.ಎಲ್.ಎ ಅಥವಾ ಎಂ.ಎಲ್.ಸಿ. ಆಗುತ್ತಾರೆ. ಈಗ ಎರಡೂ ಆಗಿ ಒಬ್ಬ ಉಳಿಯುವುದಕ್ಕೆ ಅವಕಾಶವಿರುವುದಾದರೆ ಬರೀ ಎಂ.ಎಲ್.ಎ. ಆಗಿ ಜಿಲ್ಲಾಪರಿಷತ್ ಸದಸ್ಯನಾಗಿ ಇರುತ್ತಾನಲ್ಲ ಅವನೂ ನಾಳೆ ಅಧ್ಯಕ್ಷನಾಗುವುದಕ್ಕೆ ಅರ್ಹತೆ ಪಡೆಯುತ್ತಾನೆ, ಅವನಿಗೂ ಅಧ್ಯಕ್ಷನಾಗಲಿಕ್ಕೆ ಅರ್ಹತೆಯಿದೆ. ನಾಳೆ ಕೋರ್ಟ್ ಮುಂದೆ ಪ್ರಶ್ನೆ ಮಾಡಿದಾಗ it will be discriminatory,

ಶ್ರೀ ಎಂ.ಪಿ. ಪ್ರಕಾಶ್ ಅಲ್ಲಿ ಎಲೆಕ್ಟೆಡ್ ಮೆಂಬರ್ಸ್ ಎಂಬ ಪದ ಬಳಕೆ ಇದೆ. ದಯಮಾಡಿ ಸೆಕ್ಷನ್ ೧೪(೧) ನೋಡಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಈಗ ಇದೆ ಎಲೆಕ್ಟೆಡ್ ಮೆಂಬರ್ಸ್ ಎಂದು ಇಟ್ಟಿದ್ದಾರೆ, ಅದು ಸ. That very provision will be rendered discriminatory once you allow this both the position to be enjoyed by a single person. ಇಲ್ಲಿ ಒಬ್ಬನನ್ನು ಜಿಲ್ಲಾ ಪರಿಷತ್ ಅಧ್ಯಕ್ಷನಾಗಿದ್ದು ಎಂ.ಎಲ್.ಎ ಎಂ.ಎಲ್.ಸಿ. ಇರಬಹುದೆಂದು ಆಗುತ್ತದೆ. The corollary also will be justified. ನಾನು ಒಬ್ಬ ಎಂಎಲ್ಎ ಜಿಲ್ಲಾಪರಿಷತ್ ಮೆಂಬರ್ಸ್‌ಗಿಂತ ಹೆಚ್ಚಿಗೆ ಓಟು ತೆಗೆದುಕೊಂಡು ಗೆದ್ದಿರುತ್ತೇನೆ. ಅವನಿಗಿಂತ ನನಗೆ ಜಾಸ್ತಿ ಓಟು ಬಂದಿರುತ್ತದೆ. I am equally qualified. How do you disqualify? This will be opening a flood-gate. ನಮ್ಮ ಸ್ಕೀಮ್ ಆಫ್ ಥಿಂಗ್ಸ್‌ನಲ್ಲಿ, ಸಾಕಷ್ಟು ಕನ್‌ಫ್ಯೂಶನ್ ಇದೆ. ಇವತ್ತು ಏನಾಗಿದೆ ಅಂದರೆ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಬಂದಮೇಲೆ ಶಾಸಕರಿಗೆ ಏನು ಬೆಲೆಯಿದೆ ಎಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ನಮಗೇನು ಬೆಲೆಯಿದೆ ಅಂದರೆ, ನಾನು ನಮಗೆ ಬೆಲೆಯಿಲ್ಲವೆಂದು ಹೇಳುವುದಿಲ್ಲ. ಈ ಪ್ರಶ್ನೆಯಲ್ಲಿ ಸ್ವಲ್ಪ ಗೊಂದಲವಿದೆ ನಮಗೆ ನೇರವಾಗಿ ಗ್ರ್ಯಾಂಟ್ ಮತ್ತು ಆರ್ಡರ್ ಬರೆದುಕೊಡುವುದಕ್ಕೆ ಬರುವುದಿಲ್ಲ. ಆದರೆ ಬೇರೆ ಎಲ್ಲ ಬೆಲೆ ಇಟ್ಟುಕೊಳ್ಳಬಹುದು. ಅದಕ್ಕೆ ತೊಂದರೆ ಇಲ್ಲ. ಆದರೆ ಇಲ್ಲಿರುವ ಪ್ರಶ್ನೆ ಏನು ಎಂದರೆ ಬೆಲೆ ಕೊಡದೇ ಹೋದರೆ ಏನು ಮಾಡುವುದು ಎಂದು ಅವರ ಪ್ರಶ್ನೆ ಇರುವುದು ನಾವು ಎಷ್ಟೇ ಬೆಲೆ ಇಟ್ಟುಕೊಂಡರೂ ಉಳಿದವರು ಬೆಲೆ ಕೊಡದೆ ಏನು ಹೋದರೆ ಏನು ಮಾಡುವುದು? ಇದು ಅವರ ಪ್ರಶ್ನೆ ಇದೆ ಈ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು. ನಮ್ಮ ದೇಶದಲ್ಲಿ ಎಂ.ಎಲ್ ಎ. ಅಂದಕೂಡಲೇ ಅವರು ವಿಧಾನಸಭೆಯಲ್ಲಿ ಏನು ಕೆಲಸ ಮಾಡುತ್ತಾರೆ, ರಾಜ್ಯದ ಹಿತದೃಷ್ಟಿಯಿಂದ ಏನು ನೀತಿ ನಿಲುವನ್ನು ಪ್ರತಿಪಾದನೆ ಮಾಡಿದ್ದಾರೆ ಎಂದು ಅಷ್ಟನ್ನೇ ನೋಡುವಂಥ ಪರಿಸ್ಥಿತಿಯಲ್ಲಿ ಎಲ್ಲರೂ ಇಲ್ಲ. ನಮ್ಮ ಊರಿಗೆ ಕೆರೆ ಇವನು ಮಾಡಿಸಿಕೊಟ್ಟನೇ, ಜಿಲ್ಲಾಪರಿಷತ್ ಮೆಂಬರ್ ಮಾಡಿಸಿ

ಕೊಟ್ಟನೇ, ಮಂಡಲ ಪಂಚಾಯತ್ ಅಧ್ಯಕ್ಷರು ಮಾಡಿಸಿಕೊಟ್ಟನೇ ಎಂದು ನೋಡುತ್ತಾರೆಯೆ ಹೊರತು ಗ್ರಾಂಟ್ ಇಲ್ಲಿಂದ ಹೋಗಿದ್ದನ್ನು ಅವನ ಹೇಳುವುದಿಲ್ಲ. ಊರಲ್ಲಿ ಯಾರು ಅದನ್ನು ಮಾಡಿಸಿಕೊಟ್ಟರು, ಇಂಜಿನೀಯರನ್ನು ಯಾರು ಕರೆದುಕೊಂಡು ಬಂದಿದ್ದರು ಅದನ್ನು ನೋಡುವಂಥ ಮನೋಸ್ಥಿತಿಯಲ್ಲಿ ಅವನು ಇದ್ದಾನೆ. ಇಂಥ ಒಂದು ಸಂದರ್ಭದಲ್ಲಿ Some of us who cannot attend to these things may become irrelevant. I do not mind becoming irrelevant if it comes to that. ಇಲ್ಲಿ ಪ್ರಶ್ನೆ ಏನಾಗಿದೆ ಎಂದರೆ ಇದನ್ನೆಲ್ಲಾ ಬೇಕಾದರೆ ಸರಿಪಡಿಸಿ. ಇಲ್ಲಿ ಎಂ.ಎಲ್.ಎ. ಜ್ಯೂರಿಸ್ಡಿಕ್ಷನ್ ಏನು ? What is to be expected of a Parliament Member ? What is to be expected of a Zilla Parishad Member ? ಜಿಲ್ಲಾ ಪರಿಷತ್ತಿನವರು ಏನು ಹೇಳುತ್ತಾರೆ ಗೊತ್ತೇನು ? ಎಲ್ಲಾ ಮಂಡಲ್ ಪ್ರಧಾನರೇ ಮಾಡುವುದಾದರೆ ನಾವು ಏಕೆ ಇರಬೇಕು ಎಂದು. They are also suffering from a frustration because vis-a-vis Mandal Pradhans think they have become irrelevant. ನಾಳೆ ಎಲ್ಲಾ ಮಂಡಲ ಪ್ರಧಾನರೇ ಮಾಡಿದ್ದಾರೆ ಎಂದು ಹೇಳುತ್ತಾರೆಯೇ ವಿನಃ ನಾವು ಮಾಡಿದ್ದು ಎಂದು ಆಗುವುದಿಲ್ಲ ಎನ್ನುವಂಥ ಗೊಂದಲ ಇದೆ. ಇದಕ್ಕೆ ಯಾವ ರೀತಿಯ ಪರಿಹಾರ ಕಂಡುಹಿಡಿಯಬೇಕೆಂದು ನಾವು ಯೋಚನೆ ಮಾಡುವುದು ಯೋಗ್ಯ. ಎಲ್ಲವೂ ಗೊಂದಲವಾಗಿ ಎಲ್ಲರೂ ಎಲ್ಲವೂ ಆಗಬೇಕೆಂದು ಮಂಡಲ ಪ್ರಧಾನನೂ ನಾನೇ, ಜಿಲ್ಲಾಪರಿಷತ್‌ನ ಮೆಂಬರ್ ಕೂಡ ನಾನೇ ಎಂದರೆ I can get myself first elected to Zilla Parishad and then get elected to Assembly It is not a great thing when I have the constitutency in my hand. ನಾನು ಏನು ಬೇಕೋ ಅದನ್ನು ಮಾಡಿಕೊಂಡು ಹೋಗಬಹುದು. ಈ ಪ್ರವೃತ್ತಿಗೆ ನಾಳೆ ನೀವು ಅವಕಾಶ ಮಾಡಿಕೊಡುತ್ತೇವೆ ಎಂದು ಹೇಳಿದರೆ ಒಬ್ಬನೇ ಎಲ್ಲಾ ಆಗುವುದಕ್ಕೆ ಪ್ರಯತ್ನಪಡತಕ್ಕಂಥ ಪರಿಸ್ಥಿತಿ ಬರುತ್ತದೆ. ಮಂಡಲ ಪಂಚಾಯತ್ ಸದಸ್ಯನಿಂದ ಹಿಡಿದು ಎಂ.ಎಲ್.ಎ. ಮಂತ್ರಿ ಯವರೆಗೂ ನಾನೇ ಆಗಬೇಕು ಯಾವುದಕ್ಕೂ ಯಾವುದೂ ಡಿಸ್‌ಕ್ವಾಲಿಫಿಕೇಶನ್ ಇರಬಾರದು ಎನ್ನತಕ್ಕಂಥ ವಿಷಯಕ್ಕೆ ನೀವು ಹಳಿ ಹಾಕುತ್ತಿದ್ದೀರಿ. ನಿಮಗೇನು ಅಂತಹ ತರಾತುರಿ ಬಂದಿರುವುದು? As it is I do not know whether this was necessary at all ? ಯಾರಾದರೂ ಇದು office of profit ಎಂದು ಹೇಳಿದ್ದಾರೆಯೆ ? I do not know whether it satisfies the definition at all ಈಗ ಏನು ತೊಂದರೆ ಬಂದಿದೆ ? ಪೂರ್ವಾನ್ವಯವಾಗಿ ಇದಕ್ಕೆ ಎಫೆಕ್ಟ್ ಕೊಡುತ್ತಿದ್ದೀರಿ. ಯಾವುದಾದರೂ ನಿಮ್ಮ ಕುರ್ಚಿಗಳು ಖಾಲಿಯಾಗುವ ಸಂದರ್ಭ ಇದೆಯೆ ? ಪಾಲಿಟಿಕ್ಸ್‌ಗೋಸ್ಕರ ಮಾಡಿದ್ದು ಎಂದು ಮಾನ್ಯ ಕಾನೂನು ಸಚಿವರೇ ಹೇಳಿದರು, ನೀವು ಕೇವಲ ನಿಮ್ಮ ರಾಜಕೀಯ ಭದ್ರತೆಗೆ ಇದನ್ನು ತರುವುದಾದರೆ, ನಿಮಗೆ ಮೆಜಾರಿಟಿ ಇದೆ ಎಂದು ನೀವು ತರಬಹುದು. ಹಾಗಿದ್ದರೆ ಈ ರೀತಿಯ ತೊಂದರೆ ಬಂದಿದೆ ಅದಕ್ಕಾಗಿ ಮಾಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಿ. ಅದು ಬಿಟ್ಟು ದೇಶೋದ್ಧಾರಕ್ಕೆ ಇದನ್ನು ತಂದಿದ್ದೇವೆ ಎಂದು ಹೇಳಬೇಡಿ. ನಮಗೆ ತೊಂದರೆ ಇದೆ, ನಮ್ಮ ಪಾರ್ಟಿಯವರು ಇಷ್ಟು ಜನ ಗೆದ್ದು ಬಿಟ್ಟಿದ್ದಾರೆ, ಇದನ್ನು ತರದೇ ಇದ್ದರೆ ಅವರ ಸ್ಥಾನ ಹೊರಟು ಹೋಗುತ್ತದೆ, ಅವರ ಸ್ಥಾನ ಹೋದರೆ ನಮಗೆ ಕಷ್ಟಕ್ಕೆ ಬರುತ್ತದೆ. ಆದ್ದರಿಂದ ಅದಕ್ಕೆ ಬೇಕಾದ ಕಾನೂನು ಮಾಡುತ್ತಿದ್ದೇವೆ. ವಿಧಾನಸಭೆ ಇರುವವರೆಗೆ ನಾವು ಇರುತ್ತೇವೆ ಎಂದಾದರೂ ಹೇಳಿ. ಇನ್ನೊಂದು ವಿಷಯ ಯಾವುದೋ ಪತ್ರಿಕೆಯಲ್ಲಿ ಬಂದಿದೆ. I do not know why you have not brought it because I have read a press statement on that. ಮಂಡಲ ಪಂಚಾಯತ್, ಜಿಲ್ಲಾ ಪರಿಷತ್ತಿಗೆ ಅನ್ವಯ ಆಗದಿದ್ದ ಹಾಗೆ ಮಾಡುತ್ತೇವೆ ಎಂದು ಪತ್ರಿಕಾ ಹೇಳಿಕೆಯನ್ನು ನೀವು ಕೊಟ್ಟಿದ್ದೀರಿ. ಮುಂದೆ ಆರ್ಡಿನೆನ್ಸ್ ಹೊರಡಿ ಸೋಣ, ಈಗ ಬೇಡವೆಂದು ಬಿಟ್ಟಿದ್ದಿರೋ ಏನೋ ಗೊತ್ತಿಲ್ಲ. I do not know whether it will stand the scrutiny at all. ಈಗ ಇರುವ ಪ್ರಶ್ನೆ ಎಂದರೆ ಈ ರೀತಿಯಲ್ಲಿ ಇಷ್ಟು ಸರಳವಾಗಿ ಇದು ಉಳಿಯುವುದಿಲ್ಲ. ನಾಳೆ ದಿವಸ ನೀವು ಎರಡು ಸ್ಥಾನದಲ್ಲಿ ಮುಂದುವರೆಯುವುದಕ್ಕೆ ಈ ಒಂದು ಕಾನೂನು ಪ್ರಕಾರ ಅವಕಾಶ ಮಾಡಿಕೊಟ್ಟರೆ ಮತ್ತೆ ಎಲ್ಲಾ ಎಂ.ಎಲ್.ಎ, ಎಂ.ಎಲ್.ಸಿ. ಗಳೂ ತಮಗೆ ಎಲ್ಲೆಲ್ಲಿ ಬೇಕೋ ಅಲ್ಲಿ ಅಧ್ಯಕ್ಷರಾಗುವುದಕ್ಕೆ ಪ್ರಯತ್ನಪಡುವುದು ಶುರುವಾಗುತ್ತದೆ. I do not know whether it will stand the scruting of law at all. ಏಕೆಂದರೆ ಜಿಲ್ಲಾ ಪರಿಷತ್ ಅಧ್ಯಕ್ಷನಾದವನು ಮೊದಲು ಯಾವುದೋ ಒಂದು ಜಿಲ್ಲಾ ಪರಿಷತ್ ಕಾನ್ಸ್ಟಿಟ್ಯೂಯೆನ್ಸಿಯಿಂದ ಗೆದ್ದು ಬಂದಿರುತ್ತಾನೆ. ಈಗ ಅಧ್ಯಕ್ಷನಾಗಿರುತ್ತಾನೆ. ಅವನು ಎಂ.ಎಲ್.ಎ. ಆಗಿಯೋ ಇದರೊಳಗೆ ಮುಂದುವರೆಯಬಹುದು. ನಾನು ಕೂಡ ಅವನ ಹಾಗೆ ಆ

ಕ್ಷೇತ್ರದಿಂದಲೇ ೪ ಜಿಲ್ಲಾಪರಿಷತುಗಳ, ಅಥವಾ ಎಂಟು ಜಿಲ್ಲಾಪರಿಷತ್ತುಗಳ ಮೆಂಬರ್ಸ್ ಇರುವ ಕ್ಷೇತ್ರದಿಂದಲೇ ಗೆದ್ದು ಬಂದು ಎಂ.ಎಲ್.ಎ. ಆಗುತ್ತೇನೆ, ನಾನು ಮಾತ್ರ ಏಕೆ ಅಧ್ಯಕ್ಷನಾಗಬಾರದು ಎಂಬುದು ಪ್ರಶ್ನೆ ಬರುತ್ತದೆ. So it will be rendered discriminatory and then you may have to bring an amendment and it will be struck down in view of this amendment. ಆದ್ದರಿಂದ ಇದು ಅಷ್ಟು ಸರಳವಾಗಿಲ್ಲ. ಇದರ ಬಗ್ಗೆ ಇಷ್ಟೊಂದು ಗಾಬರಿ ಮಾಡಬೇಕಾದ ಅಗತ್ಯ ಇಲ್ಲ. ದಯವಿಟ್ಟು, ಬೇಕಾದರೆ, Let us discuss the philosophy of the disqualification on the grounds of office of profit. ನಮ್ಮ ರಾಜ್ಯದಲ್ಲಿ ಯಾವಯಾವುದು ಆಫೀಸ್ ಆಫ್ ಪ್ರಾಫಿಟ್ ಇರಬೇಕು, ಯಾವುದು ಡಿಸ್‌ಕ್ವಾಲಿಫಿಕೇಷನ್ ಆಗಬೇಕು ಎಂಬ ಬಗ್ಗೆ ತಿದ್ದುಪಡಿ ತನ್ನಿ. ಸರ್ಕಾರಕ್ಕೆ ಒತ್ತಡ ಬಂದ ಹಾಗೆ ಇದು ಮಾಡುವುದಲ್ಲ. Boards ಕಾರ್ಪೊರೇಷನ್‌ಗಳು ಆಫೀಸ್ ಆಫ್ ಪ್ರಾಫಿಟ್ ಎಂದು ಹೇಳುವುದು. ನಮಗೆ ಇಲ್ಲಿ ಮೆಜಾರಿಟಿ ಕಡಿಮೆಯಾದರೆ, ಎಂ.ಎಲ್.ಎ. ಗಳು ಎದುರಿಸುತ್ತಾರೆಂದು ಡಿಸ್ ಕ್ವಾಲಿಫಿಕೇಷನ್ ಇಲ್ಲ ಎಂದು ಹೇಳಿ ಎಂ.ಎಲ್.ಎ. ಗಳಿಗೆ ಯಾರು ಯಾರಿಗೆ ಬೋರ್ಡ್ ಬೇಕು, ಕಾರ್ಪೊರೇಷನ್ ಬೇಕು, ಆ ರೀತಿ ಮಾಡಿಕೊಂಡು ಹೋಗುವುದು ನಡೆದಿದೆ. ೧೯೮೩ರಲ್ಲಿ ಈ ರೀತಿ ಮಾಡಿದರು. ಈ ರೀತಿ ಆಫೀಸ್ ಆಫ್ ಪ್ರಾಫಿಟ್ ಎಂದು ಹೇಳಿದರೆ ಏನಿರಬೇಕು. ರಾಜ್ಯಾಂಗದ ಹಿನ್ನೆಲೆಯಲ್ಲಿ ಅದನ್ನು ಅಧ್ಯಯನ ಮಾಡದ ರೀತಿ, ಈಗಿರುವ ಸಲಹೆಗಳು ಏನು, ಏನು ಮಾಡಬೇಕು. ನಮಗೆ ವ್ಯಾವಹಾರಿಕವಾಗಿ ಅತ್ಯಂತ ತೊಂದರೆ ಬರತಕ್ಕ ವಿಷಯಗಳು ಯಾವುವು ? ಅದರಲ್ಲಿ ಎಷ್ಟರ ಮಟ್ಟಿಗೆ ನಮ್ಮ ಅಧಿಕಾರವನ್ನು ಚಲಾಯಿಸಿ ಸರಿಹೊಂದಿಸಿಕೊಳ್ಳಬೇಕೆಂಬುದಕ್ಕೆ ನನ್ನ ವಿರೋಧವಿಲ್ಲ. ಏಕೆಂದರೆ ರಾಜ್ಯಾಂಗದಲ್ಲಿ ಅದಕ್ಕೆ ಅಧಿಕಾರ ಕೊಟ್ಟಿದ್ದಾರೆ. ಏಕೆಂದರೆ ನೀವು ಸ್ವಲ್ಪ ಯೋಚನೆ ಮಾಡಿ ನಿಮ್ಮ ಅಭಿಪ್ರಾಯವನ್ನು ಹೇಳಿ ಎಂದು ರಾಜ್ಯಾಂಗದಲ್ಲಿ ಹೇಳಿದ್ದಾರೆ. ನೀವು ಯೋಚನೆ ಮಾಡದೇ, ಹೇಗೆ ಒತ್ತಡ ಬರುತೋ ಹಾಗೆಯೇ, ಕಾನೂನು ಮಾಡಿಕೊಳ್ಳುತ್ತಾ ಹೋದರೆ, it won't carry conviction with the public. It is not correct. Office of profit ಎಂದರೆ, so much so you can totally make as of the Constitutions provision ಎಂದು ಸಂವಿಧಾನ ಹೇಳಿಲ್ಲ. ಇದನ್ನು ಮಾಡಕೂಡದು ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಈಗ ಇರುವಂತೆ ಏನು ಡಿಸ್‌ಕ್ವಾಲಿಫಿಕೇಶನ್ ಯಾರಿಗೆ ಬರುತ್ತದೆ. ಏತಕ್ಕೋಸ್ಕರ ಇದನ್ನು ತಂದಿದ್ದೀರಿ. ಈ ಕಾನೂನು ಮಾಡದೇ ಹೋದರೆ, ಎಷ್ಟು ಜನ ಏನೇನು ಕಳೆದುಕೊಳ್ಳುತ್ತಾರೆ ಎಂಬುದನ್ನು ಹೇಳಿ. ಯಾರು ಯಾರು ಅಧಿಕಾರ ಕಳೆದುಕೊಳ್ಳುತ್ತಾರೋ ಅವರ ರಕ್ಷಣೆಗೋಸ್ಕರ, ತರಾತುರಿಯಲ್ಲಿ ಇದನ್ನು ತಂದಿದ್ದೀ ರೆಂದು ಹೇಳಿ. You have said 'It is felt', Why it is felt ? We want to know. It is deemed necessary, it is considered necessary ಎಂದು ಅಬ್ಜೆಕ್ಟ್ ಅಂಡ್ ರೀಸನ್ಸ್‌ನಲ್ಲಿ ಅಷ್ಟು ಹೇಳಿದರೆ ಸಾಲದು. We know that whenever Government brings some legislation, it deems it necessary. That is why it brings it. There is no meaning in saying it. Why it has come to the conclusion that a particular legislation is very much necessary ? Particularly, ತಾವು ಆರ್ಡಿನೆನ್ಸ್ ಹೊರಡಿಸಿ ಆದರ ಜಾಗದಲ್ಲಿ ಇದನ್ನು ಈ ಸದನದ ಮುಂದೆ ತರುವಂಥ ಆತುರ ಏನಿತ್ತು ? ಇದು ಯಾವುದನ್ನೂ ಹೇಳದೆ, ಸುಮ್ಮನೆ, ನಮ್ಮದು ಸರ್ಕಾರ, ನಮಗೆ ಬೇಕಾದ್ದು ನಾವು ಮಾಡುತ್ತೇವೆ ಎಂದು ಉತ್ತರ ಕೊಡುವುದಾದರೆ, ನಾವು ವಾದ ಮಾಡಿ ಏನೂ ಇದರಿಂದ ಪ್ರಯೋಜನವಿಲ್ಲ. ನಿಮಗೆ ಖುಷಿ ಕಂಡಿದ್ದು ನೀವು ಮಾಡಬಹುದು ನಮಗೆ ಖುಷಿ ಕಂಡದ್ದು ನಾವು ಹೇಳಬಹುದು ಎನ್ನುವುದು ಸರಿಯಲ್ಲ ದಯವಿಟ್ಟು ಇದಕ್ಕೆ ಸಮರ್ಥ ಉತ್ತರ ಕೊಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ತಾವು ಕಾನೂನು ಪಾಂಡಿತ್ಯವನ್ನು ವಿಶ್ಲೇಷಣೆ ಮಾಡುತ್ತಿದ್ದೀರಿ. ತಮಗೆ ಮೈನಾರಿಟಿ ಇದೆ, ಮೆಜಾರಿಟಿ ಇಲ್ಲ ಎನ್ನುವ ಕಾರಣಕ್ಕೋ ಅಥವಾ ಇನ್ನೇನಾದರೂ ಕಾನೂನಿನ ಕಾರಣಕ್ಕೋ? ಮಂಡಲ್ ಸಂಖ್ಯೆ ನಿಮಗೆ ಮೆಜಾರಿಟಿ ಇಲ್ಲ ಎನ್ನುವ ಕಾರಣಕ್ಕೆ ಈ ಎಲ್ಲಾ ವಿಶ್ಲೇಷಣೆ ಕಾನೂನು ಪಾಂಡಿತ್ಯ ತರುತ್ತಿದ್ದೀರೋ ಅಥವಅದಕ್ಕೆ ಬೇರೆ ಕಾರಣ ಇದೆಯೋ ?

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಂಡಲ್ ಬಗ್ಗೆ ಮೆಜಾರಿಟಿ ಇದೆಯೆಂದು, ನಿಮಗೇನಾದರೂ ಭ್ರಮೆ ಇದೆಯೋ. As on to-day have you got majority ? You are

under that impression. Remove your disqualification ಕಾನೂನು ತೆಗೆಯಿರಿ, ನಾಳೆ ಬೆಳಿಗ್ಗೆ ಎಷ್ಟು ಮಂಡಲ್ ನಿಮ್ಮ ಕೈಯಲ್ಲಿ ಉಳಿಯುತ್ತವೆ.

ಶ್ರೀ ಎಂ. ಪಿ. ಪ್ರಕಾಶ್.—ಮೊದಲು ಪಾರ್ಲಿಮೆಂಟ್‌ನಲ್ಲಿ ತೆಗೆಸಿಬಿಡಿ, ಆಗ ನಿಮಗೆ ಮೆಜಾರಿಟಿ ಎಷ್ಟಿದೆ ಎಂದು ಗೊತ್ತಾಗುತ್ತದೆ. ಅಲ್ಲಿ ಇದನ್ನು ತರದೇ ಹೋಗಿದ್ದರೆ, ಇವತ್ತು ವಿ.ಪಿ. ಸಿಂಗ್‌ರವರ ಜೊತೆ ಎಷ್ಟೋ ಜನ ಬರುತ್ತಿದ್ದರು.

ಪ್ರೊ|| ಎ. ಲಕ್ಷ್ಮೀಸಾಗರ್.—ಕೇಂದ್ರದಲ್ಲಿ ಆಂಟಿ ಡಿಫೆಕ್ಷನ್ ಬಿಲ್ ಅನ್ನು ೧೯೮೫ರಲ್ಲಿ ತರಾತುರಿಯಲ್ಲಿ ತಂದಿರಲ್ಲ, ಯಾರನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ತಂದಿರಿ. ಸುಮ್ಮನೆ ಅವಕಾಶ ಸಿಕ್ಕಿದೆ ಎಂದು ವಾದ ಮಾಡುವುದು ಬೇಡ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಮಗೆ ಮಂಡಲದಲ್ಲಿ ಮೆಜಾರಿಟಿ ಬೇಕಾಗಿಲ್ಲ. ಏಕೆಂದರೆ, ಮಂಡಲದಲ್ಲಿ ಮಂಡೆ ಹೊಡೆದುಕೊಳ್ಳುತ್ತಿದ್ದಾರೆ. ನೀವು ತಿಳಿದುಕೊಂಡಿರುವ ರೀತಿ, ಅಲ್ಲಿಯ ಸ್ಥಿತಿ ಇಲ್ಲ. ಮಂಡಲ್‌ನಲ್ಲಿ ಮೆಜಾರಿಟಿ ಇಲ್ಲದಿರುವುದೇ ನಮಗೆ ಕ್ಷೇಮ. ನಿಮ್ಮ ಕಾಲದಲ್ಲಿ ಮಂಡಲ ಕಟ್ಟಿಕೊಂಡರೆ. ನಿಮ್ಮ ತಲೆ ಜೊತೆ ನಮ್ಮ ತಲೆಯೂ ಹೋಗುತ್ತದೆ. ಅದಕ್ಕೋಸ್ಕರ ಆ ಭ್ರಮೆ ನಮಗೆ ಇಲ್ಲ. ಅದರ ಬಗ್ಗೆ ನಾನು ಹೇಳುತ್ತಾ ಇಲ್ಲ. ಕಾನೂನು ಮಾಡುವುದು ನಿಮ್ಮ ಮಂಡಲ, ನಮ್ಮ ಮಂಡಲ ಎಂದಲ್ಲ. ನಮ್ಮ, ನಿಮ್ಮ ಮುಂದೆ ನೋಡಿಕೊಂಡಲ್ಲ. ಈ ದೇಶಕ್ಕೋಸ್ಕರ ನೀವು ಕಾನೂನು ತರಬೇಕಾದರೆ. ಈ ದೇಶದ ಹಿತದೃಷ್ಟಿ ಅಗತ್ಯ. ವಿವರಣೆಯನ್ನು ಕೊಡಬೇಕಾದರೆ, ನೀವು ತರುವಂಥ ಕಾನೂನು ೧೦ ವರ್ಷಗಳ ಕಾಲವಾದರೂ ಅಗತ್ಯವಾಗಿ ಉಳಿಯಬೇಕು. ಚುನಾವಣೆಯ ಅಗತ್ಯವಾಗಿ ಕಾನೂನು ತರುವುದಕಲ್ಲ ಈ ಲೆಜಿಸ್ಲೇಟಿವ್ ಬಾಡಿ ಇರುವುದು. ಆ ಒಂದು ದೃಷ್ಟಿಯಿಂದ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈ ಬಗ್ಗೆ ಈಗಾಗಲೇ ಸಾಕಷ್ಟು ಗೊಂದಲ ಇದೆ. ಜಿಲ್ಲಾಪರಿಷತ್ತು, ಮಂಡಲ್ ಪಂಚಾಯಿತಿ ಮತ್ತು ಲೆಜಿಸ್ಲೇಟಿವ್ ಮಧ್ಯದಲ್ಲಿ ಸಾಕಷ್ಟು ಗೊಂದಲ ಇದೆ. ಇನ್ನಷ್ಟು ಗೊಂದಲದಿಂದ ಈ ಕಾನೂನಿನಿಂದ ಸೃಷ್ಟಿಮಾಡಬೇಡಿ. ಈಗಿರುವ ಗೊಂದಲವನ್ನು ಪತ್ತೆ ಮಾಡಿ, ಅದನ್ನು ಸುಧಾರಿಸುವ ಕಾನೂನು ಇದ್ದರೆ ತೆಗೆದುಕೊಂಡು ಬನ್ನಿ, ನಾವು ಚರ್ಚೆ ಮಾಡಿ, ಅದಕ್ಕೆ ಒಪ್ಪಿಗೆ ಕೊಡುವುದಕ್ಕೆ ಸಿದ್ಧವಿದ್ದೇವೆ. ಈ ಬಿಲ್ ಖಂಡಿತವಾಗಿಯೂ, it will not help to solve the present difficulties that are experienced in that field. It is irrelevant. It is unnecessary. So, I insist that the Government should withhold this Bill.

೧–೩೦ ಪಿ.ಎಂ.

† ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ಅಧ್ಯಕ್ಷರೇ. ಈ ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಪ್ರಾರಂಭವಾದ ಮೇಲೆ ಸಿಟಿಯಲ್ಲಿರುವ ಶಾಸಕರಿಗೆ ಏನೇನು ಕಷ್ಟ ಇದೆ ಎಂಬ ವಿಚಾರವನ್ನು ಮಾನ್ಯ ಬೆಲ್ಲದ್ ಅವರು ಹೇಳಿದರು. ಈ ಶಾಸಕರ ಪರಿಸ್ಥಿತಿ ಏನಾಗಿದೆ ಎಂದರೆ ಯಾರಿಗೂ ನಾವು ಬೇಕಾಗಿಲ್ಲ. ನಿಮಗೆ ಬೇಕಾದಾಗ ಒಂದೊಂದು ಶಾಸನ ಮಾಡಿಕೊಂಡು ಬಂದಿದ್ದೀರಿ. ಈ ಜಿಲ್ಲಾ ಪರಿಷತ್‌ಗೆ ಇರುವ ಪತ್ರೋಟಿ ನೋಡಿದರೆ, ಸಿಟಿಯಲ್ಲಿರುವ ಎಂ.ಎಲ್.ಎ.ಗೇ ಆಗಲೀ, ಅಲ್ಲಿರುವ ಮುನಿಸಿಪಾಲಿಟಿಗಾಗಲೀ, ಅಲ್ಲಿರುವ ಪ್ರೆಸಿಡೆಂಟ್‌ಗಾಗಲಿ, ಈ ಜಿಲ್ಲಾ ಪರಿಷತ್ ಜೊತೆ ಏನೇನೂ ಸಂಬಂಧ ಇಲ್ಲದ ಹಾಗೆ ಮಾಡಿ ಇಟ್ಟಿದ್ದೀರಿ. ಎಜುಕೇಷನ್ ಡಿಪಾರ್ಟ್‌ಮೆಂಟ್ ಹಾಗೂ ಮಿಕ್ಕ ವಿಚಾರದಲ್ಲಿ ಕೂಡಾ ಅವರು ಏನೂ ಮಾಡುವ ಹಾಗೆ ಇಲ್ಲ. ಈ ವಿಚಾರದಲ್ಲಿ ಹೊಸದಾಗಿ ಲೆಜಿಸ್ಲೇಷನ್ ತರುತ್ತೇನೆ ಎಂದು ನಜೀರ್ ಸಾಹೇಬರು ಹೇಳುತ್ತಿದ್ದರು. ಆದರೆ ಇದರ ಬಗ್ಗೆ ಏನೂ ಆಗಲಿಲ್ಲ. ನಿಮಗೆ ಏನು ಅವಸರ ಬಂದಿದೆ ಎಂದರೆ, ಅವರು ಎಲ್ಲಿ ಓಡಿ ಹೋಗುತ್ತಾರೋ, ಎಲ್ಲಿ ಅವರು ಎಂ.ಎಲ್.ಎ. ಸ್ಥಾನಗಳಿಗೆ ಏನಾದರೂ ಪ್ರಯತ್ನ ಮಾಡುತ್ತಾರೋ ಎಂದು ಇದನ್ನು ತಂದಿದ್ದೀರಿ. ಆದರೆ ಇದರ ಅರ್ಜೆನ್ಸಿ ಏನೂ ಇರಲಿಲ್ಲ ಎಂದು ನನಗೆ ಅರ್ಥವಾಗುತ್ತದೆ. ಮೊದಲೇ ಸಿಟಿಗೂ ವಿಲೇಜಸ್‌ಗೂ ಸಂಬಂಧ ಏನಿದೆ ಅದು ಇನ್ನೂ ಜಟಿಲವಾಗುತ್ತಿದೆ. ಸುಮ್ಮನೆ ಟೀಚರ್ಸ್‌ನ್ನು ಟ್ರಾನ್ಸ್‌ಫರ್ ಮಾಡುತ್ತಿದ್ದಾರೆ. ಏನಾದರೂ ಒಂದು ಕಿರುಕುಳ ಕೊಡುತ್ತಿದ್ದಾರೆ. ಜಿಲ್ಲಾ ಪರಿಷತ್ ಅಧ್ಯಕ್ಷರು ಹಾಗೂ ಮೆಂಬರ್ಸ್ ಮಾಡುವ ಕೆಲಸಗಳನ್ನು ನಾವು ನೋಡುತ್ತಿದ್ದೇವೆ. ಇದು ಬಹಳ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವಿಚಿತ್ರವಾಗಿ ಕಾಣುವ ವಿಷಯ. ನಾವು ಹೋಗಿ ಯಾರಿಗೆ ಹೇಳಬೇಕೆಂದರೆ ಯಾರಿಗೂ ಹೇಳುವಹಾಗೆ ಇಲ್ಲ. ಇವತ್ತು ಜಿಲ್ಲಾ ಪರಿಷತ್ ಪ್ರೆಸಿಡೆಂಟ್ಸ್, ಮಂಡಲ್ ಪಂಚಾಯತ್ ಪ್ರೆಸಿಡೆಂಟ್ಸ್ ಸ್ಥಾನಗಳನ್ನು ಏತಕ್ಕೆ ಮಾಡಿದ್ದೀರಿ ಎಂದರೆ, ಕೆಲವರಿಗೆ ಸ್ಥಾನಮಾನ, ಕಾರು, ಮುಂತಾದವು ಸಿಗುತ್ತದೆ ಎಂದು ಈ ತಿದ್ದುಪಡಿ ಕಾನೂನನ್ನು ತಂದಿದ್ದೀರಿ ಎಂದು ನಾನು ಆಪಾದನೆ ಕೂಡಾ ಮಾಡಬೇಕಾಗುತ್ತದೆ. ಇದನ್ನು ಸರಿಯಾದ ರೀತಿಯಲ್ಲಿ ಮಾಡಬೇಕು ಎಂದು ಹೇಳಿ ಇದನ್ನು ವಿರೋಧಿಸುತ್ತ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಎಂ. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷಿಣಿಯವರೇ, ಈಗಾಗಲೇ ಈ ತಿದ್ದುಪಡಿ ಬಗ್ಗೆ ಹಲವಾರು ಜನ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ಈ ತಿದ್ದುಪಡಿಯನ್ನು ರಾಜಕೀಯ ಉದ್ದೇಶಕ್ಕಾಗಿ ತಂದಿದ್ದಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇದನ್ನು ಮಾನ್ಯ ಲಕ್ಷ್ಮೀಸಾಗರ್‌ರವರು ನೇರವಾಗಿ ಒಪ್ಪಿಕೊಳ್ಳದಿದ್ದರೂ ಪರೋಕ್ಷವಾಗಿ ಒಂದು ರೀತಿ ಒಪ್ಪಿಕೊಂಡಿದ್ದಾರೆ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಮೇಲೆ, ಜಿಲ್ಲಾ ಪರಿಷತ್ ಸದಸ್ಯರಾಗಿ ಕೆಲಸ ಮಾಡತಕ್ಕಂಥ ಮತ್ತು ತಾಲ್ಲೂಕು ಪಂಚಾಯತ್ ಸಮಿತಿ ಅಧ್ಯಕ್ಷರಾಗಿ ಕೆಲಸ ಮಾಡತಕ್ಕ ಶಾಸನಸಭಾ ಸದಸ್ಯರುಗಳಲ್ಲಿ ಹೆಚ್ಚಿನ ಜನರಿಗೆ ಗೊಂದಲ ಪ್ರಾರಂಭವಾಗಿದೆ. ಗೊಂದಲ ಯಾವರೀತಿ ಪ್ರಾರಂಭವಾಗಿದೆ ಎಂದರೆ. ಒಂದು ಕಡೆ ಈ ದೇಶದಲ್ಲಿರತಕ್ಕ ವ್ಯವಸ್ಥೆ [illegible] ಶಾಸನಸಭೆಯ ಸದಸ್ಯರು ಆಗಿ ಮಾಡಬೇಕಾದಂಥ ಮೂಲಭೂತ ಕೆಲಸಗಳು ಏನಿವೆ ಅದರ ಬಗ್ಗೆ ಶ್ರೀನಿವಾಸ್‌ರವರು ಪ್ರಸ್ತಾಪ ಮಾಡಿದ್ದಾರೆ. ಈಗ ಅವುಗಳನ್ನು ಬಿಟ್ಟು ಬೇರೆ ರೀತಿ ಮಾಡತಕ್ಕ ವ್ಯವಸ್ಥೆಯನ್ನು ನಮ್ಮ ಕಣ್ಮುಂದೆ ಕಾಣುತ್ತಿದ್ದೇವೆ. ಅದರಲ್ಲೂ ಇವತ್ತಿನ ಜನತಾ ದಳ ಅಧಿಕಾರಕ್ಕೆ ಬಂದಮೇಲೆ ಇದು ಬಹಳ ಗೊಂದಲವಾಗಿದೆ. ಇವರು ಅಧಿಕಾರಕ್ಕೆ ಬಂದಾಗ ವಿಲೇಜ್ ಪಂಚಾಯತ್ ವ್ಯವಸ್ಥೆ ಇರಲಿಲ್ಲ, ತಾಲ್ಲೂಕು ಬೋರ್ಡ್ಸ್ ಇರಲಿಲ್ಲ. ಆಗ ಎಂ.ಎಲ್.ಎ.ಯೇ ಸರ್ವಸ್ವ ಆಗಿ ಹೋಗಿದ್ದರು. ಒಂದು ಹಳ್ಳಿಯಲ್ಲಿ ಬೀದಿ ದೀಪದ ಸಮಸ್ಯೆ ಬಂದಾಗ, ರಸ್ತೆಯ ಚರಂಡಿಯ ಸಮಸ್ಯೆ ಬಂದಾಗ, ಅದನ್ನು ಶಾಸಕರೇ ಸರಿ ಮಾಡಬೇಕಿತ್ತು. ಮನೆಯ ಮುಂದೆ ಸಣ್ಣ ಕಲ್ಲು ಇದ್ದು ಅದನ್ನು ಎಡವಿದಾಗಲೂ ಸಹ ಊರಿನವರು ಎಂ.ಎಲ್.ಎ. ಇದ್ದಾನೋ ಇಲ್ಲವೋ ಅವನು ಏನು ಮಾಡುತ್ತಿದ್ದಾನೆ ಎಂದು ಜನ ಬೈಯುತ್ತಿದ್ದರು. ಆ ಪರಿಸ್ಥಿತಿ ಇತ್ತು. ನಂತರ ಈ ರೀತಿಯ ವ್ಯವಸ್ಥೆ ಹೋಗಿ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ವ್ಯವಸ್ಥೆ ಜಾರಿಗೆ ಬಂತು. ಇಲ್ಲಿ ಏನಾಗಿದೆ ಎಂದರೆ ಒಂದು ಕಡೆ ಮಂಡಲ್ ಪಂಚಾಯತ್ ಪ್ರಧಾನರಿಗೆ ತಮ್ಮದೇ ಆದಂಥ ಅಧಿಕಾರಗಳು ಕಾನೂನು ಪ್ರಕಾರ ಇದೆ. ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಏನಿದ್ದಾರೆ ಅವರಿಗೆ ಕೆಲವೊಂದು ಅನುಕೂಲಗಳು, ಸೌಲಭ್ಯಗಳು ಹಣ, ಟಿ.ಎ.ಡಿ.ಎ.ಗಳು ಮತ್ತು ಗನ್ಮ್ಯಾನ್ ಇಷ್ಟು ಬಿಟ್ಟರೆ ಬೇರೆ ಹೇಳಿಕೊಳ್ಳುವ ಅಧಿಕಾರ ಇಲ್ಲ. ಇಲ್ಲಿ ಏನಾಗಿದೆ ಎಂದರೆ ಮಂಡಲ ಪಂಚಾಯಿತಿ ಪ್ರಧಾನರಿಗೆ ಮಿತಿ ಮೀರಿದ ಅಧಿಕಾರ ಕಾನೂನು ಪ್ರಕಾರ ಇದೆ. ಅದೇ ಜಿಲ್ಲಾ ಪರಿಷತ್ತು ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರಿಗೆ ಅನುಕೂಲಗಳು ಮತ್ತು ಸವಲತ್ತುಗಳೆಂದರೆ ಸಂಬಳ. ಅವರ ಟಿ.ಎ. ಮತ್ತು ಡಿ.ಎ. ಕಾರು ಇವು ಬಿಟ್ಟರೆ ಅಂತಹ ಹೇಳಿಕೊಳ್ಳತಕ್ಕಂಥ ಅಧಿಕಾರವೇನೂ ಇಲ್ಲ. ಇದು ಕಾನೂನಿನಲ್ಲಿ ಇದೆ. ನಾನು ಇದನ್ನು ತಿಳಿದುಕೊಂಡಿದ್ದೇನೆ. ಅವರಿಗೂ ಸಹ ಒಂದು ಸ್ಥಾನಮಾನ ಬೇಕಾಗುತ್ತದೆ. ಶಾಸಕರಾದವರ ಪರಿಸ್ಥಿತಿ ಏನೆಂದರೆ ಅವರು ತಾಲ್ಲೂಕು ಸಮಿತಿ ಅಧ್ಯಕ್ಷರು ಸಭೆ ಕರೆದಾಗ ಹೋಗಿ ಅಲ್ಲಿ ಒಂದು ಠರಾವು ಪಾಸ್ ಮಾಡುವುದು ಬರುವುದು, ಈ ಕೆಲಸ ಆಗಿದೆ. ಅದು ಬಿಟ್ಟರೆ ಬೇರೆ ಕೆಲಸ

(ಶ್ರೀ ಬಿ.ಜಿ. ಬಣಕಾರ್‌ರವರು ಅಧ್ಯಕ್ಷ ಪೀಠಕ್ಕೆ ಬಂದರು)

ಇಲ್ಲ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಹೆಚ್. ಶ್ರೀನಿವಾಸ್‌ರವರು ಈ ಬಗ್ಗೆ ಸವಿಸ್ತಾರವಾಗಿ ಹೇಳಿದರು. ತಾವು ಸಹ ಈ ಬಗ್ಗೆ ಯೋಚನೆ ಮಾಡಬೇಕು. ಈ ಬಗ್ಗೆ ಒಂದು ನೀತಿ ನಿರೂಪಣೆಯನ್ನು ವಿವರವಾಗಿ ಮಾಡಬೇಕಾಗಿದೆ. ಅದನ್ನು ಇವತ್ತಿನವರೆಗೂ ಮಾಡತಕ್ಕಂಥ ಪ್ರಯತ್ನಕ್ಕೆ ಸರ್ಕಾರ ಕೈ ಹಾಕಲಿಲ್ಲ. ಇವತ್ತು ಈ ಒಂದು ಗೊಂದಲ ಸಹ ಇದೆ. ಮಾನ್ಯ ಸದಸ್ಯರನೇಕರು ಹೇಳಿದ ಪ್ರಕಾರ ಹಲವರನ್ನು ಮೆಚ್ಚಿಸುವ ಸಲುವಾಗಿ ಈ ಮಸೂದೆಯನ್ನು ತಾವು ತಂದಿದ್ದೀರಿ. ಜಿಲ್ಲಾ ಪರಿಷತ್ತು ಕಾನೂನು ಜಾರಿಗೆ ಬಂದಮೇಲೆ ಆ ಭಾಗದಲ್ಲಿರತಕ್ಕಂಥ ಶಾಸಕರು ಏನೂ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲವೆನ್ನುವ ಅಭಿಪ್ರಾಯಕ್ಕೆ ಬಂದಿದ್ದಾರೆ. ಮತ್ತು ಮಾನ್ಯ ರಾಮಪ್ಪನವರು ಹೇಳಿದಹಾಗೆ ಅರ್ಬನ್ ಸೈಡ್‌ನಲ್ಲಿರತಕ್ಕಂಥ ಶಾಸಕರು ಏನೂ ಕೆಲಸ ಮಾಡಲು

ಆಗುತ್ತಿಲ್ಲ. ಉದಾಹರಣೆಗೆ ವಿದ್ಯಾ ಇಲಾಖೆ. ಸಮಾಜ ಕಲ್ಯಾಣ ಇಲಾಖೆ ಇನ್ನಿತರ ಬೇರೆ ಬೇರೆ ಇಲಾಖೆಗಳನ್ನೇ ತೆಗೆದುಕೊಂಡರೂ ಸಹ ಅಲ್ಲಿಯೂ ಇದೇ ಸಮಸ್ಯೆ ಇದೆ. ಈ ಎಲ್ಲಾ ಸಮಸ್ಯೆಗಳನ್ನು [illegible] ಸ ಮಾಡಿ ಈ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುವ ಸಲುವಾಗಿ ಒಂದು ಸಮಗ್ರವಾದ ಶಾಸನ ತರಬೇಕಾಗಿತ್ತು. ಇವೆಲ್ಲವನ್ನು ತಾವು ಯೋಚನೆ ಮಾಡದೆ ಬೆಳಗಾಂ ಜಿಲ್ಲಾ ಪರಿಷತ್‌ನಲ್ಲಿ ನಿಮ್ಮವರು ಒಬ್ಬರು ಉಪಾಧ್ಯಕ್ಷರಾಗಿದ್ದಾರೆ. ಅವರು ಈಗ ಎಂ.ಎಲ್.ಸಿ. ಆಗಿ ಆಯ್ಕೆ ಆಗಿ ಬಂದಿದ್ದಾರೆ. ಅವರು [illegible] ಎಂದು ಒಬ್ಬ ಸಾಮಾನ್ಯ ಮನುಷ್ಯನಿಗೂ ಅರ್ಥವಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಹೇಳಿದ ಹಾಗೆ ಯಾರಾದರೂ ಈ ಬಗ್ಗೆ ಕೋರ್ಟಿಗೆ ಹೋದರೆ ಪರಿಸ್ಥಿತಿ ಏನಾಗುತ್ತದೆ? ಜಿಲ್ಲಾ ಪರಿಷತ್‌ನಲ್ಲಿ ಶಾಸಕರು ಸಹ ಅಧ್ಯಕ್ಷರಾಗಬಹುದು ಎಂದು ವಾದ ಮಾಡಿದರೆ ಆಗ ಕೋರ್ಟ್ ಸಹ ಈ ಕಾನೂನಿನ ಪ್ರಕಾರ ಒಪ್ಪಿಕೊಳ್ಳಬಹುದು.

ಈ ರೀತಿಯಾದ ಒಂದು ದೋಷ ಈ ಕಾನೂನಿನಲ್ಲಿ ಇದೆ. ಇದನ್ನು ಯಾರೂ ಸಹ ತೆಗೆದು ಹಾಕುವಂತೆ ಇಲ್ಲ. ಇನ್ನು ಆಫೀಸ್ ಆಫ್ ದಿ ಪ್ರಾಫಿಟ್ ಪ್ರಶ್ನೆ ಬಂದಾಗ ಜಿಲ್ಲಾ ಪರಿಷತ್ ಅಧ್ಯಕ್ಷರಾಗಿರುವವರು ಎಂ.ಎಲ್.ಸಿ. ಆಗಿ ಆಯ್ಕೆಯಾಗಿ ಬಂದರೆ ಒಂದು ಕಡೆ ಅವರು ರಾಜೀನಾಮೆ ಕೊಡಬೇಕಾಗುತ್ತದೆ. ಈ ಷರತ್ತನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಆಗ ಸ್ವಲ್ಪ ಮಟ್ಟಿಗೆ ಈ ಕಾನೂನನ್ನು ಒಪ್ಪಿಕೊಳ್ಳಬಹುದು ಎಂದು ನನಗನಿಸುತ್ತದೆ. ಈ ಬಗ್ಗೆ ಮಾನ್ಯ ಸಚಿವರು ಆಶ್ವಾಸನೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಹಾಗೂ ಪಂಚಾಯಿತಿ ಸಮಿತಿಗಳ ವ್ಯವಸ್ಥೆಯಲ್ಲಿ ಈಗ ಗೊಂದಲಗಳು ಇವೆ. ಈ ಗೊಂದಲಗಳನ್ನು ನಿವಾರಣೆ ಮಾಡಲು ತಕ್ಷಣ ಕಾನೂನು ತಿದ್ದುಪಡಿ ಮಾಡತಕ್ಕಂಥದ್ದು ಕೂಡ ಇದೆ. ಅದನ್ನು ಮಾಡಬೇಕು. ಇಲ್ಲದಿದ್ದರೆ ಶಾಸಕರು ನಿಜವಾಗಿಯೂ ಅಸೂಯೆ ಪಡುತ್ತಾರೆ. ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಅಸೂಯೆ ಪಡತಕ್ಕಂಥ ಸೂಚನೆ ಎಲ್ಲಾ ಕಡೆ ನಮಗೆ ಕಂಡು ಬರುತ್ತಿದೆ. ಆದ್ದರಿಂದ ಆದಷ್ಟು ಬೇಗ ಇದನ್ನು ಸರಿಮಾಡಬೇಕೆಂದು ಹೇಳುತ್ತೇನೆ. ಈ ಬಿಲ್ಲನ್ನು ತಾವು ಈಗ ತಮ್ಮ ರಾಜಕೀಯ ಉದ್ದೇಶಕ್ಕಾಗಿ ತಂದಿರುವುದರಿಂದ ನಾನು ಇದನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).....ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಮಂತ್ರಿಗಳು ಈ ಬಿಲ್ ಮಂಡಿಸುವಾಗ ಬಹಳ ಸುಲಭ ಹಾಗೂ ಸರಳವಾದಂಥ ತಿದ್ದುಪಡಿ ತಂದಿದ್ದೇವೆಂದು ಹೇಳಿದರು ಆದರೆ ಇದರ ಒಳಗೆ ನಾವು ಹಿಸುಕಿ ಹಿಸುಕಿ ನೋಡಿದಾಗ ಇದು ಅಷ್ಟೊಂದು ಸುಲಭವೂ ಅಲ್ಲ, ಸರಳವೂ ಅಲ್ಲ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಬಿಲ್ ತರುವಾಗ ಅಧಿಕಾರ ವಿಕೇಂದ್ರೀಕರಣವಾಗುತ್ತದೆಂದು ಹೇಳಿದರು. ಆದರೆ ಇವತ್ತು ಈ ಮಸೂದೆಯಿಂದ ಆಗಿರತಕ್ಕಂಥ ಗೊಂದಲಗಳನ್ನು ನೋಡಿದರೆ, ಈ ಜಿಲ್ಲಾ ಪರಿಷತ್ತುಗಳಲ್ಲಿ ಮತ್ತು ಮಂಡಲ ಪಂಚಾಯಿತಿಗಳಲ್ಲಿ ಅಸೂಯೆ ದ್ವೇಷಗಳು ಮತ್ತು ಸಮಸ್ಯೆಗಳಿರುವುದು ಪ್ರತಿಯೊಬ್ಬರಿಗೂ ಗೊತ್ತಿರತಕ್ಕಂಥ ವಿಚಾರ. ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಸುಮಾರು ೯೫೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ಇದರಲ್ಲಿ ೬೦೦ ಕೋಟಿ ರೂಪಾಯಿಗಳು ಯೋಜನೇತರ ವೆಚ್ಚಕ್ಕೆ ಖರ್ಚಾದರೆ, ಇನ್ನುಳಿದ ೩೦೦-೪೦೦ ಕೋಟಿ ರೂಪಾಯಿಗಳು ಅಭಿವೃದ್ಧಿ ಕೆಲಸಗಳಿಗೆ ಎಂದು ಹೇಳಿದರು. ಆದರೆ ನಾವು ಇವತ್ತು ಮಂಡಲ ಪಂಚಾಯಿತಿಗಳಲ್ಲಿ ಹೋಗಿ ನೋಡಿದರೆ ಮಂಡಲ ಪಂಚಾಯಿತಿ ಅಧ್ಯಕ್ಷರು ಕುಳಿತುಕೊಳ್ಳತಕ್ಕಂಥ ಕುರ್ಚಿಯನ್ನು ನೋಡಿದರೆ ಅದ್ಭುತವಾದಂಥ ಸಂಗತಿಯಾಗುತ್ತದೆ. ಇದೊಂದು ವಿಕೇಂದ್ರೀಕರಣದ ಸವಲತ್ತು ಎಂದು ಅವರು ಭಾವಿಸಿದ್ದಾರೆ. ಈ ರೀತಿಯ ಕುರ್ಚಿ ನಮಗೆ ಬೇಡ. ಒಂದೊಂದು ಕುರ್ಚಿ ೩-೪ ಸಾವಿರ ರೂಪಾಯಿಗಳು ಇರಬಹುದು. ಮಂಡಲ ಪಂಚಾಯಿತಿ ಪ್ರಧಾನರು ಮತ್ತು ಉಪ-ಪ್ರಧಾನರು ಗತ್ತಿನಿಂದ ಓಡಾಡುತ್ತಿದ್ದಾರೆ. ಅವರ ಗತ್ತಿಗೆ ಒಂದು ದಿನ ಕುತ್ತು ಬರುತ್ತದೆ ಎಂದರೆ ತಪ್ಪಾಗುವುದಿಲ್ಲ. ಇವರ ಗತ್ತು ಬಹಳ ಕಾಲ ಉಳಿಯುವುದಿಲ್ಲ. ನಿಮ್ಮ ಗತ್ತಿಗೆ ಕುತ್ತು ಬರುತ್ತದೆ. ಜಿಲ್ಲಾ ಪರಿಷತ್ತು ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರಿಗೆ ಶಾಸಕರಿಗೆ ಇರತಕ್ಕಂಥ ರೀತಿಯಲ್ಲಿ ಅರ್ಹತೆ ಬರಬೇಕು, ಅಲ್ಲಿ ಅನರ್ಹತೆ ಬರಬಾರದೆಂದು ಹೇಳತಕ್ಕಂಥ ಯಾವ ಈ ತಿದ್ದುಪಡಿ ಇದೆ, ಇದರಲ್ಲಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷನಾದವ, ಉಪಾಧ್ಯಕ್ಷನಾದವ ನೇರವಾಗಿ ಎಂ.ಎಲ್.ಸಿ., ಎಂ.ಎಲ್.ಎ., ಆಗಬಹುದೆಂದು ಇಲ್ಲಿ ಹೇಳಿದ್ದೀರಿ. ಅಲ್ಲಿಗೆ ರಾಜೀನಾಮೆ ಕೊಡತಕ್ಕಂಥ ಒಂದು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪ್ರಶ್ನೆ ಇದರಲ್ಲಿ ಬರುವುದಿಲ್ಲ. ಆದ್ದರಿಂದ: ಇದೊಂದು ಸಮಂಜಸವಾದ ತಿದ್ದುಪಡಿ ಅಲ್ಲವೆಂದು ನನ್ನ ಅಭಿಪ್ರಾಯ. ಆಗ ಮಾನ್ಯ ಬಸವಲಿಂಗಪ್ಪನವರು ಹೇಳುವಾಗ ಈ ಹರಿಜನರಿಗೆ ಕೊಡತಕ್ಕಂಥ ಸ್ಥಾನದಲ್ಲಿ ಕೂಡ ಹೆಚ್ಚು ಕಡಿಮೆಯಾಗಿದೆಯೆಂದು ಹೇಳಿದರು. ಅದಕ್ಕೆ ಮಾನ್ಯ ನಜೀರ್‌ಸಾಬ್‌ರವರು ಈ ಹಿಂದೆ ಇದಕ್ಕೆ ಒಂದು ತಿದ್ದುಪಡಿ ತರುತ್ತೇನೆ, ಎಸ್.ಸಿ. ಯವರಿಗೆ ಹೋಗತಕ್ಕಂಥ ಸೀಟುಗಳಲ್ಲಿ ಹೆಚ್ಚು ಕಡಿಮೆಯಾಗಿ ಹೆಚ್ಚು ಸೀಟುಗಳು ಗಿರಿಜನರಿಗೆ ಏನು ಹೋಗಿದೆ, ಅದನ್ನು ಸರಿಪಡಿಸುವುದಕ್ಕೆ ತಿದ್ದುಪಡಿ ತರಲಾಗುತ್ತದೆಂದು ಈ ಸದನದಲ್ಲಿ ಅವರು ಒಪ್ಪಿದ್ದರು. ಇದಕ್ಕೆ ತಿದ್ದುಪಡಿ ತಂದು ಸರಿಮಾಡುತ್ತೇನೆಂದು ಹೇಳಿದ್ದರು. ಇಂಥಾ ಅನೇಕ ವಿಚಾರಗಳು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಇರುವಾಗ ಇದನ್ನೆಲ್ಲಾ ಕೂಡಿ ಒಂದು ಸಮಗ್ರವಾದ ತಿದ್ದುಪಡಿಯನ್ನು ತರಬಹುದಾಗಿತ್ತು. ಇವತ್ತು ತರಾತುರಿಯಾಗಿ ಇಷ್ಟೊಂದು ಅವಸರವಾಗಿ ಇದನ್ನು ತರುವಂಥ ವ್ಯವಸ್ಥೆ ಸರಿಯಲ್ಲ. ನನ್ನ ಅನೇಕ ಮಿತ್ರರು ಹೇಳಿದ ಹಾಗೆ ಇದರಲ್ಲಿ ಯಾವುದೋ ಒಂದು ಒಳಸಂಚು ಅಥವಾ ಒಂದು ಸಂದೇಹ ಇದ್ದೇ ಇದೆಯೆಂದು ಭಾವನೆಯಾಗುತ್ತದೆ. ಏನೇ ಆಗಲಿ. ಇದು ಸರಿಯಾದಂಥ ವ್ಯವಸ್ಥೆಯಲ್ಲ. ಇವತ್ತು ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿ ಮಸೂದೆ ರಚನೆ ಮಾಡುವಾಗ ಒಳ್ಳೆಯ ಅಭಿಪ್ರಾಯದಲ್ಲಿ ಮಾಡಿದ್ದು. ಆದರೆ ಇವತ್ತು ಜಿಲ್ಲಾಪರಿಷತ್ತುಗಳು ಬಿಳಿ ಆನೆಗಳಾಗಿವೆ. ಮಂಡಲ ಪಂಚಾಯಿತಿಗಳು ಮರಿ ಆನೆ ಗಳಾಗಿವೆ. ತಾವು ಇದನ್ನು ಸರಿಯಾಗಿ ಪರಿಶೀಲನೆ ಮಾಡಿ ನೋಡಿ. ಎಷ್ಟು ಖರ್ಚಾಗುತ್ತದೆ ಎಂದು, ಯೋಜನೇತರವಾಗಿ ಬಹಳ ಖರ್ಚು ಆಗುತ್ತದೆ. ಅಲ್ಲಿನ ಪೀಠೋಪಕರಣಗಳೇನು ? ಮರದ ಬುಡದಲ್ಲಿ ನಿಂತಂಥ ಕಾರುಗಳು, ಆ ಮರದ ಬುಡದಲ್ಲಿ ನಿಂತಂಥ ಜೀಪುಗಳು, ಒಂದು ಜಿಲ್ಲಾಪರಿಷತ್ತಿನ ಮರದ ಬುಡದಲ್ಲಿ ಜೀಪುಗಳೆಷ್ಟು, ಕಾರುಗಳೆಷ್ಟು, ಆ ಉಪ ಕಾರ್ಯದರ್ಶಿಗೆ, ಈ ಉಪ ಕಾರ್ಯದರ್ಶಿಗೆ, ಈ ಕಾರ್ಯದರ್ಶಿಗೆ, ಆ ಅಧ್ಯಕ್ಷರಿಗೆ, ಈ ಉಪಾಧ್ಯಕ್ಷರಿಗೆ, ಆ ಮತ್ತೊಬ್ಬರಿಗೆ, ಈ ಮತ್ತೊಬ್ಬರಿಗೆ ಎಂದು ಹೇಳಿ ಈ ರೀತಿಯಾಗಿ ಬೆಳೆದಿದೆ. ಇದರಿಂದ ಖರ್ಚು ಜಾಸ್ತಿ ಆಗುತ್ತದೆ ಅಧಿಕಾರ ವಿಕೇಂದ್ರೀಕರಣವು ನಿಜವಾಗಿಯೂ ಅಧಃಪತನದಲ್ಲಿ ಇದೆಯೆಂದು ಹೇಳಬಹುದು. ಅಧಿಕಾರ ವಿಕೇಂದ್ರೀಕರಣಕ್ಕೆ ನಾನು ವಿರೋಧಿಯಲ್ಲ. ಆಗ ನಾವು ಇದಕ್ಕೆ ಒಪ್ಪಿಗೆ ಕೊಟ್ಟಿದ್ದೇವೆ. ಆದರೂ ಕೂಡ ಇದನ್ನೆಲ್ಲಾ ನಿಲ್ಲಿಸಬೇಕು. ಇದಕ್ಕೆ ನಿಮ್ಮ ಒಂದು ಲಗಾಮು ಇರಬೇಕು. ಆದರೆ ಲಗಾಮು ಇಲ್ಲ ಇವತ್ತು. ಯಾವ, ಜಿಲ್ಲಾಪರಿಷತ್ತಿನಲ್ಲಾಗಲೀ, ಮಂಡಲ ಪಂಚಾಯಿತಿಯಾಗಲೀ, ಅವುಗಳ ಮೇಲೆ ಸರ್ಕಾರದ ಲಗಾಮು ಇಟ್ಟು ಸರಿಯಾಗಿ ಎಳೆಯತಕ್ಕಂಥ ವ್ಯವಸ್ಥೆ ಇಲ್ಲ. ಅವರನ್ನು ಅವರ ಇಷ್ಟಕ್ಕೆ ಬಿಟ್ಟಿದ್ದೀರಿ. ಅವರು ಕುಶಲವಾಗಿ, ಬಹಳ ಸಂತೋಷದಿಂದ, ಬಹಳ ಹಾಯಾಗಿ ನಮ್ಮನ್ನು ಯಾರೂ ಕೇಳುವವರೇ ಇಲ್ಲ, ನಮ್ಮನ್ನು ಯಾರೂ ನೋಡುವವರೇ ಇಲ್ಲ, ನಾವು ಮಾಡಿದ್ದೇ ದರ್ಬಾರು ಎಂದು ಹೇಳತಕ್ಕಂಥ ರೀತಿಯಾಗಿದೆ. ಅವರು ಮಂತ್ರಿಗಳ ಮಾತೇ ಕೇಳುವುದಿಲ್ಲ. ತಾವು ಬೇಕಾದರೆ ಹೋಗಿ ನೋಡಿ, ಇದನ್ನೆಲ್ಲಾ ನಾವು ಅನುಭವದಲ್ಲಿ ಕಂಡದ್ದು. ನಮ್ಮ ಪ್ರತಿನಿಧಿಗಳು, ನಮ್ಮ ಜನರು ಬಂದು ಇವರ ಬಗ್ಗೆ ಹೇಳುತ್ತಾರೆ. ಆಮೇಲೆ, ನಾವು ಅನೇಕ ಆಫೀಸ್‌ಗೆ ಹೋಗುತ್ತೇವೆ. ಕೆಲವು ಅಧಿಕಾರಿಗಳು ಶಾಸಕರನ್ನೇ ಕೇರ್ ಮಾಡುವುದಿಲ್ಲ, ಹಾಗಿದ್ದಾರೆ, ನಾವು ಹೋದಾಗ ಕುಳಿತುಕೊಳ್ಳಿ ಎಂದೂ ಕೂಡಾ ಹೇಳುವುದಿಲ್ಲ. ಶಾಸಕರು ಬಂದರೆ ಎದ್ದು ನಿಂತು ಗೌರವದಿಂದ ಅವರುಗಳನ್ನು ಕೂರಿಸಬೇಕೆಂದು ಸರ್ಕಾರದ ಸುತ್ತೋಲೆಯಲ್ಲಿ ಇದೆ. ಮತ್ತೆ ಹೊರಡುವಾಗ ಕೈ ಕುಲಕಿ ಕಳುಹಿಸಬೇಕೆಂದು ಇದೆ. ಆದರೆ ಅವರ ದರ್ಬಾರು ಏನು ? ಇರಲಿ, ಇದು ಬಹು ಕಾಲ ಇರುವುದಿಲ್ಲ. ನೀವು ಆರಿಸಿ ಬಂದವರು, ನಾವು ಸೆಲೆಕ್ಷನ್ ಆಗಿ ಬಂದವರೆಂದು ಅಧಿಕಾರಿಗಳು ಹೇಳುತ್ತಾರೆ. ಎಲ್ಲಾ ಅಧಿಕಾರಿಗಳು ಈ ರೀತಿ ಇರುವುದಿಲ್ಲ. ಕೆಲವು ಅಧಿಕಾರಿಗಳು ಆ ರೀತಿ ಹೇಳುತ್ತಾರೆ. ಅವರುಗಳಿಗೆ ರಿಟೈರ್ ಆದ ಮೇಲೆ ಗೊತ್ತಾಗುತ್ತದೆ. ವಾಕಿಂಗ್ ಸ್ಟಿಕ್ ಹಿಡಿದು ಹೋಗುವಾಗ ಯಾವ ಒಬ್ಬ ಮಗನೂ ಅವರನ್ನು ನೋಡುವುದಿಲ್ಲ. ಒಳ್ಳೆಯವರನ್ನು ಯಾವಾಗಲೂ ಮಾತನಾಡಿಸುತ್ತಾರೆ. ನಮಸ್ಕಾರ ಸ್ವಾಮಿ ಎಂದು ಹೇಳುತ್ತಾರೆ. ಆದ್ದರಿಂದ ಈ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿಗೆ ತಂದಿರುವ ತಿದ್ದುಪಡಿ ಸರಿಯಲ್ಲವೆಂದು ಹೇಳಿ, ಇದನ್ನು ವಾಪಸ್ ತೆಗೆದುಕೊಂಡು ಬರುವ ಅಧಿವೇಶನದಲ್ಲಿ ಸಮಗ್ರವಾದಂಥ ರೀತಿಯಲ್ಲಿ ತಿದ್ದುಪಡಿಗಳನ್ನು ಅಳವಡಿಸಿಕೊಂಡು ತರುವುದು ಒಳ್ಳೆಯದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ಲಕ್ಷ್ಮೀಸಾಗರ್‌ರವರೇ, ನೀಲಕಂಠಪ್ಪನವರು ಮಾತನಾಡುತ್ತೇನೆಂದು ಹೇಳುತ್ತಾರೆ.

ಪ್ರೊ ಎ. ಲಕ್ಷ್ಮೀಸಾಗರ್.—ಈ ಸಭೆಯ ಕಾರ್ಯಕಲಾಪಗಳನ್ನು ನಡೆಸತಕ್ಕವರು ನೀವು. ಯಾರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು ಕೊಡಬಾರದೆಂಬ ಬಗ್ಗೆ ನಿರ್ಧರಿಸುವವರು ನೀವು.

ಅವರ ಕಡೆಯವರು ಮಾತನಾಡಿರುವುದರಿಂದ, ಈ ಕಡೆಯವರೂ ಮಾತನಾಡಲಿ. ತಾವು ಅವಕಾಶ ಕೊಡುವುದಾದರೆ ಕೊಡಬಹುದು.

† ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೇ, ಏನು ಇವತ್ತು ಜಿಲ್ಲಾ ಪರಿಷತ್ತಿನ ಮಸೂದೆಯ ಬಗ್ಗೆ ಒಂದು ತಿದ್ದುಪಡಿಯನ್ನು ತಂದಿದ್ದಾರೋ ಅದನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಾ, ಕೆಲವು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಜಿಲ್ಲಾಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಎರಡೂ ಕಡೆ ಅಧಿಕಾರವನ್ನು ಮಾಡಬಹುದೆಂದು ಹೇಳಿದ್ದಾರೆ. ಹಾಗೂ ಪ್ರಧಾನರ ಬಗ್ಗೆ ಒಂದು ತಿದ್ದುಪಡಿಯನ್ನು ತರಲೇಬೇಕಾಗಿದೆ. ಪೂರ್ಣವಾಗಿ ಹಣದ ದುರುಪಯೋಗ ಮತ್ತು ಅಧಿಕಾರ ದುರುಪಯೋಗ ಮಾಡಿದ ಪ್ರಧಾನರನ್ನು ಡಿಸ್‌ಕ್ವಾಲಿಫೈ ಮಾಡುವಂಥ ಯಾವ ನಿರ್ಣಯವೂ ಆಗಿಲ್ಲ. ಅವರು ತಮ್ಮ ಅಧಿಕಾರದ ದುರುಪಯೋಗ ಮಾಡಿದರೂ ಕೂಡ ಅವರನ್ನು ಅನರ್ಹರನ್ನಾಗಿ ಮಾಡುವಂಥ ಯಾವ ನಿರ್ಣಯವೂ ಇಲ್ಲಿಯವರೆಗೆ ಆಗಿಲ್ಲ. ಆದುದರಿಂದ ಮಾನ್ಯ ಸಚಿವರಾದ ಪ್ರಕಾಶ್‌ರವರಲ್ಲಿ ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ತಪ್ಪಿತಸ್ಥ ಪ್ರಧಾನರನ್ನು ಅನರ್ಹಗೊಳಿಸುವ ಬಗ್ಗೆ ತಿದ್ದುಪಡಿಯನ್ನು ತರಬೇಕೆಂದು ಕೇಳಿಕೊಂಡಿದ್ದೇನೆ. ಇನ್ನು ನಮ್ಮಲ್ಲಿ ತಾಲ್ಲೂಕು ಪಂಚಾಯತ್ ಸಮಿತಿ ಸಭೆಗಳು, ಗ್ರಾಮಸಭೆಗಳು ಆಗುತ್ತವೆ. ಅಲ್ಲಿ ಹಲವಾರು ನಿರ್ಣಯಗಳೂ ಆಗುತ್ತವೆ. ಅವುಗಳನ್ನು ಜಿಲ್ಲಾ ಪರಿಷತ್ತಿಗೆ ಕಳುಹಿಸಿ ಕೊಡುತ್ತಾರೆ. ಆದರೆ ಅಲ್ಲಿ ಅವರು ಅವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಕಸದ ಬುಟ್ಟಿಗೆ ಹಾಕುತ್ತಾರೆ. ನಂತರ ತಮ್ಮದೇ ಆದ ನಿರ್ಣಯವನ್ನು ಅಲ್ಲಿ ಅವರು ತೆಗೆದುಕೊಳ್ಳುತ್ತಾರೆ. ಇದಕ್ಕೆ ಬದಲು ತಾಲ್ಲೂಕು ಪಂಚಾಯತ್ ಸಮಿತಿಯವರು ಗ್ರಾಮಪಂಚಾಯತ್ ಸಮಿತಿಯವರು ಮಾಡಿದ ನಿರ್ಣಯಗಳನ್ನು ಜಿಲ್ಲಾಪರಿಷತ್‌ನವರು ಗಣನೆಗೆ ತೆದುಕೊಳ್ಳುವಂತೆ ತಿದ್ದುಪಡಿಯನ್ನು ಮಾಡಬೇಕು. ತಾಲ್ಲೂಕು ಸಮಿತಿಯಲ್ಲಿ ಇರುವ ಸಹಕಾರಿ ಮತ್ತು ಪಿ.ಎಚ್.ಇ. ಇಲಾಖೆಗಳ ಬಗ್ಗೆ ಇರುವ ಅಧಿಕಾರ ಅವರ ಅಲ್ಲಿಯೇ ಮುಂದುವರೆಯುವಂತಹ ಒಂದು ಕಾನೂನನ್ನು ತರಬೇಕೆಂದು ಹೇಳುತ್ತಾ, ಈ ತಿದ್ದುಪಡಿಯನ್ನು ಸ್ವಾಗತಿಸಿ, ತಪ್ಪಿತಸ್ಥ ಪ್ರಧಾನ ಉಪಪ್ರಧಾನ ಮುಂತಾದವರನ್ನು ಅನರ್ಹಗೊಳಿಸುವ ಒಂದು ತಿದ್ದುಪಡಿಯನ್ನು ತರಲೇ ಬೇಕು, ಕಾರಣ ಇಂಥ ಸಾವಿರಾರು ಪ್ರಕರಣಗಳನ್ನು ಶಾಸಕರಾಗಿ ನಾವು ಕಾಣುತ್ತಾ ಇದ್ದೇವೆ. ಇವೊತ್ತಿನ ದಿವಸ ಶಾಸಕರ ಮಾತನ್ನು ಯಾರೂ ಕೇಳುವವರಿಲ್ಲವಾಗಿದೆ, ಶಾಸಕರ ಪರಿಸ್ಥಿತಿಯನ್ನು ಕೆಲವರು ಇಲ್ಲಿ ಹೇಳಿಕೊಳ್ಳುತ್ತಾರೆ. ಇನ್ನು ಕೆಲವರು ಹೇಳಿಕೊಳ್ಳುವುದಿಲ್ಲ, ಜಿಲ್ಲಾಪರಿಷತ್, ಮಂಡಲ್ ಪಂಚಾಯತ್ ವ್ಯವಸ್ಥೆಯ ನಂತರ ಸಂಭಂಧಪಟ್ಟವರು ಲಂಗುಲಗಾಮ್ ಇಲ್ಲದೆ ನಡೆದುಕೊಳ್ಳುತ್ತಾ ಇದ್ದಾರೆ. ಇವೆಲ್ಲವನ್ನೂ ಅರ್ಥ ಮಾಡಿಕೊಂಡು ಮಾನ್ಯ ಲಕ್ಷ್ಮೀಸಾಗರ್‌ರವರು ಮುಂದಿನ ಸಾರಿಯಾದರೂ ಒಂದು ಸೂಕ್ತ ತಿದ್ದುಪಡಿಯನ್ನು ಈ ದಿಶೆಯಲ್ಲಿ ತರುತ್ತಾರೆ ಎಂದು ಆಶಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಬ್ಲೆಸಿಯಸ್ ಡಿಸೋಜಾರವರು ಮಾತನಾಡಬಹುದು.

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ ನನಗೆ ಅವಕಾಶ ಕೊಡಿ... ..

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಅಧ್ಯಕ್ಷರೇ ನನಗೆ ಅವಕಾಶ ಮಾಡಿಕೊಡಿ ...

ಅಧ್ಯಕ್ಷರು.—ಇನ್ನೂ ಎರಡು ಬಿಲ್‌ಗಳು ಇವೆ. ಆವಾಗ ತಮಗೆ ಅವಕಾಶ ಕೊಡಬಹುದಾಗಿದೆ. ದಯವಿಟ್ಟು ತಾವುಗಳು ಕುಳಿತುಕೊಳ್ಳಬೇಕು. ಈಗ ಬ್ಲೇಸಿಯಸ್ ಡಿಸೋಜರವರು ಮಾತನಾಡುತ್ತಾರೆ.

SRI BLASIUS M. D'SOUZA (MANGALORE).—Sir, I am really sorry that the Hon'ble minister for Law has brought in such an amendment it does not hold water. If he has to amend this Act he has toa, amend Section 154 clause (2) of the Karnataka Zill Parish dsTaluk panchayat Samithis, Mandal Panchayats and Nyaya Panchayats Act, 1983. Section 154 (2) reads:

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

> "If a person who is chosen as a Member of a Zilla Parishad is a Member of the House of Peple, the Council of States, the State Legislative Assembly or the State Legislative Council, or is a municipal councillor or a Councillor of a municipal corporation or a Member of a sanitary board or a town board or a notified area committee, then at the expiration of a period of fifteen days from the date of notification of the names of the members under section 159, his seat in the Zilla parishads shall become vacant unless he has previously resigned his seatin in the House of the people, the Council of States, the State Legislative Assembly or the State Legislative Council or the municipal council or the municipal corporation or the sanitary board or the town board or the notified area committee, as the case may be".

Unless this particular section is amended, I dot't think anybody has got a right to be member of the Assembly as well as Member of the Zilla Parishad. Further about office of profit, it is very clear in Section 166 of the above Act. Section 166 reads:

> "The salary and allowances payble to the Adhyaksha and Upadhyaksha shall respectively be those payable to the Minister of State and the Deputy Minister under the Karnataka Ministers Salaries and Allowances Act, 1957".

It is clearly stated that anybody getting salary and allowances under this Act it does not amounts office of profit. So, as I said this bill which he has moved does not hold any water. I request the Hon'ble Minister because I know he is adamant, he never agree to our proposal, he wants that bill be passed. I would request the Hon'ble Minister to withdraw this bill. Otherwise, this will be challenged in the court. This will be a shame to this House because this House is mainly deals with Legislation. We have to use maximun time for legislation. We donot want to hurry with the legislation work. I request, finnally, the Minister to go trough all sections and bring a comprehensive incorporating all other amendment founds Bill.

† ಶ್ರೀ ಪಟವಂಕ್ಕಿ ರತ್ನಾಕರ್ (ತೀರ್ಥಹಳ್ಳಿ). – ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಏನು ತಿದ್ದುಪಡಿ ಬಿಲ್‌ನ್ನು ಮುಂದೆ ತಂದಿದ್ದಾರೆ, ಇದರ ಬಗ್ಗೆ ಹೇಳಬೇಕೆಂದರೆ, ಈ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯ್ತಿಗಳ ಬಗ್ಗೆ ಹೊಸ ವ್ಯವಸ್ಥೆ ಕಾರ್ಯರೂಪಕ್ಕೆ ಬಂದ ನಂತರ, ಅದು ಎದುರಿಸಿದ ಸಮಸ್ಯೆಗಳು ಮತ್ತು ನಾವು ಕೂಡ ವಿಕೇಂದ್ರೀಕೃತ ಸಂಸ್ಥೆಗಳಲ್ಲಿ ಕೆಲಸಮಾಡಿದ ಅನುಭವಗಳ ಆಧಾರದ ಮೇಲೆ ಕೆಲವು ತಿದ್ದುಪಡಿಯಾಗಬೇಕೆಂಬುದು ನಮ್ಮೆಲ್ಲರ ಮನೋಭಾವನೆಯಾಗಿದೆ ಮತ್ತು ಸಾರ್ವಜನಿಕರಿಗೆ ಕೂಡ ಈ ಅಭಿಪ್ರಾಯ ಬಂದಿದೆ. ಆದ್ದರಿಂದ ಮಹತ್ವದ,

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಾರ್ವಜನಿಕ ಅಗತ್ಯದ ತಿದ್ದುಪಡಿಗಳನ್ನು ಜಿಲ್ಲಾಪರಿಷತ್ ಮಂಡಲಪಂಚಾಯತ್‌ಗಳು ಬಂದ ಮೇಲೆ ಮಾಡಬೇಕಾದ ಅವಶ್ಯಕತೆ ಇದೆ. ಆದರೆ ಮಾನ್ಯ ಮಂತ್ರಿಗಳು ತಂದಿರುವ ತಿದ್ದುಪಡಿ ಬಿಲ್ ಅನ್ನು ನೋಡಿದರೆ ನಮಗೆ ಬೇಕಾಗಿರುವುದನ್ನು ಬಿಟ್ಟು ಬೇಡದೆ ಇರುವ ಅನವಶ್ಯಕವಾದ ಯಾವುದೋ ಒಂದು ತಿದ್ದುಪಡಿಗೆ ಜೋತುಬಿದ್ದಿದ್ದಾರಲ್ಲ ಎಂಬುದೇ ನಮ್ಮೆಲ್ಲರ ಸಂಶಯ. ಹಾಗೆಯೇ, ಈ ತಿದ್ದುಪಡಿ ತರಬೇಕಾದರೆ ಇದರಲ್ಲಿ ಏನೋ ಇದೆ ಎಂದು ಸ್ವಾರ್ಥದ ಉದ್ದೇಶ ಇದೆ ನನಗನಿಸುತ್ತದೆ. ಅದಿರಲಿ, ಈಗ ಏನು ಈ ಮಂಡಲ ಪಂಚಾಯತ್ ಮತ್ತು ಜಿಲ್ಲಾಪರಿಷತ್‌ಗಳ ಮೂಲಕ ಜನಗಳ ಕೈಲಿ ಅಧಿಕಾರ ಕೊಟ್ಟಿದ್ದೇವೆ ಎಂದು ಹೇಳಿಕೊಂಡು ಇವರು ತಿರುಗುತ್ತಿದ್ದಾರೆ, ಅವುಗಳಲ್ಲಿ ಮಹತ್ವದ ತಿದ್ದುಪಡಿಯಾಗಬೇಕಾದ ವಿಷಯಗಳು ಇವೆ. ಅಂಥದ್ದನ್ನು ಬೇರೆ ಸದಸ್ಯರೆಲ್ಲರೂ ಈ ಮನೆಯಲ್ಲಿ ಪ್ರಸ್ತಾಪ ಮಾಡಿಯೂ ಇದ್ದಾರೆ. ಈ ನಿಟ್ಟಿನಲ್ಲಿ ಜಿಲ್ಲಾಪರಿಷತ್‌ಗಳು ಮಾಡುವ ಭ್ರಷ್ಟಾಚಾರದ ಮೇಲೆ, ಅದರ ಅಧ್ಯಕ್ಷರು, ಉಪಾಧ್ಯಕ್ಷರು ಕಾರ್ಯದರ್ಶಿಗಳು ಮಾಡುವ ದುಂದುವೆಚ್ಚದ ಮೇಲೆ ಸರ್ಕಾರದ ನಿಯಂತ್ರಣ ಏನಾದರೂ ಇದೆಯೇ? ಇದರ ಬಗ್ಗೆ ಯೋಚಿಸಬೇಕು. ಅಧಿಕಾರ ವಿಕೇಂದ್ರೀಕರಣ ಎಂದರೆ ಭ್ರಷ್ಟಾಚಾರ ಮಾಡುವುದಕ್ಕೆ, ದುಂದುವೆಚ್ಚ ಮಾಡುವುದಕ್ಕೆ ಪರವಾನಿಗೆ ಯೆಂದು ಅವರು ಭಾವಿಸಬಾರದು. ಇದರ ಬಗ್ಗೆ ತಿದ್ದುಪಡಿಯ ಅವಶ್ಯಕತೆ ಇದೆ. ಅದೇ ರೀತಿ ಮಂಡಲಪಂಚಾಯಿತಿಗಳಲ್ಲಿ ಪ್ರಧಾನರು ಉಪಪ್ರಧಾನರು ಗ್ರಾಮೀಣ ಪ್ರದೇಶಗಳಲ್ಲಿ ಒಂದು ರೀತಿಯ ತುಂಡು ಅರಸರಾಗಿದ್ದಾರೆ. ಅವರು ಮಾಡಿದ್ದೇ ಆಟ ಹೇಳಿದ್ದೇ ಪಾಠ ಎಂಬ ಸರ್ವಾಧಿಕಾರಿಯ ಮನೋಭಾವ ಅವರಲ್ಲಿ ಕಾಣುತ್ತಿದೆ. ಎಲ್ಲೆಲ್ಲಿ ಪ್ರಬಲ ಕೋಮುಗಳಿಗೆ ಪ್ರಾತಿನಿಧ್ಯ ಸಿಕ್ಕಿದೆಯೋ ಅಲ್ಲೆಲ್ಲ ಹಿಂದುಳಿದ ಜಾತಿ ಪಂಗಡಗಳ ಮೇಲೆ ನಡೆಯುವ ದಬ್ಬಾಳಿಕೆ ಮಿತಿಮೀರಿದೆ ಎಂದು ಶಾಸಕರೂ ಸಾರ್ವಜನಿಕರೂ ಹೇಳುತ್ತಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್.—ಆ ಭಾವನೆ ಸಾರ್ವಜನಿಕರಲ್ಲಿ ಇಲ್ಲ, ಶಾಸಕರಲ್ಲಿ ಇರಬಹುದು.

ಶ್ರೀ ಪಟಪಕ್ಕಿ ರತ್ನಾಕರ್.—ಮಾನ್ಯ ಪಟೇಲರು ಮಂಡಲ ಪಂಚಾಯ್ತಿಗಳಿಗೆ ಬೇಟಿ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಅವುಗಳ ಒಳಹೊಕ್ಕು ನೋಡಿದರೆ ಅವರಿಗೆ ಇದೆಲ್ಲಾ ಅರ್ಥ ವಾದೀತು ಶ್ರೀ ಕೆ. ಹೆಚ್. ಶ್ರೀನಿವಾಸರು ಹೇಳಿದ ಹಾಗೆ ಇವುಗಳೆಲ್ಲ ಮುಂದೆ ಕಟ್ಟಿರುವ ಪಂಚಾಯ್ತಿಗಳಾಗಿವೆ. ಆದುದರಿಂದ ಅವುಗಳಿಗೆ ನಾವು ಕೊಟ್ಟಿರುವ ಅಧಿಕಾರ ಸದುಪಯೋಗವಾಗ ಬೇಕು. ಅಧಿಕಾರ ಸಾಮಾನ್ಯ ಜನರ ಮೇಲೆ ಪ್ರಯೋಗಿಸುವ ಅಸ್ತ್ರ ಆಗಬಾರದು. ಆ ರೀತಿಯ ಹಿಡಿತ ಸರ್ಕಾರಕ್ಕೆ ಈ ಸಂಸ್ಥೆಗಳ ಮೇಲೆ ಇರುವಂತಹ ವ್ಯವಸ್ಥೆ ಜಾರಿ ಆಗ ಬೇಕಾಗಿದೆ. ತಾಲ್ಲೂಕು ಪಂಚಾಯತಿಯನ್ನು ಮಾಡಿದ್ದೀರಿ, ಅಲ್ಲಿ ಶಾಸಕರನ್ನು ಅಧ್ಯಕ್ಷರನ್ನಾಗಿ ಕೂಡಿಸಿದ್ದೀರಿ. ಇದರಿಂದ ಏನು ಪ್ರಯೋಜನವಿದೆ. ಈ ಸಮಿತಿಗೆ ಬೇಕಾಗಿರತಕ್ಕಂತಹ ಕಾನೂನು ಬದ್ಧವಾದ ಕೆಲವು ಹಕ್ಕುಗಳನ್ನು ನೀಡುವ ಬಗ್ಗೆ ನಿಯಮಗಳನ್ನು ಮಾಡಿದರೆ ಮಾತ್ರ ತಾಲ್ಲೂಕು ಪಂಚಾಯತಿಯ ಅಧ್ಯಕ್ಷ ಸ್ಥಾನಕ್ಕೆ ಮತ್ತು ತಾಲ್ಲೂಕು ಪಂಚಾಯತಿ ಸಮಿತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯ ವಾಗುತ್ತದೆ. ಆ ಸ್ಥಾನಕ್ಕೆ ಅದು ಶೋಭೆ ತರುತ್ತದೆ. ಶಾಸಕರಿಗೂ ಜಿಲ್ಲಾಪರಿಷತ್ತಿನ ಸದಸ್ಯರಿಗೂ, ಮಂಡಲಪಂಚಾಯತಿ ಸದಸ್ಯರಿಗೂ ಒಂದು ರೀತಿಯ ಸಂಘರ್ಷ ನಡೆಯುತ್ತಿದೆ. ಇಲ್ಲಿನ ಶಾಸಕರು ಮಂಡಲ ಪಂಚಾಯತಿ ಸದಸ್ಯರಿಗೆ ಇಲ್ಲವೇ ಜಿಲ್ಲಾಪರಿಷತ್ತಿನ ಅಧ್ಯಕ್ಷರಿಗೆ ಕಾಗದ ಬರೆದರೆ ಆ ಶಾಸಕರು ಆರಿಸಿಬಂದಂಥ ಪಕ್ಷ ಅಲ್ಲಿ ಅಧಿಕಾರದಲ್ಲಿ ಇಲ್ಲದಿದ್ದರೆ ಅವರು ಆ ಕಾಗದಕ್ಕೆ ಬೆಲೆ ಕೊಡುವುದಿಲ್ಲ ಇಂತಹ ಅನೇಕ ಉದಾಹರಣೆಗಳಿವೆ. ಮಂಡಲ ಪಂಚಾಯತಿಯಲ್ಲಿ ರಾಜಕೀಯ ಸಂಘರ್ಷ ಪೈಪೋಟಿ ಇರತಕ್ಕಂಥಾದ್ದು ಸರ್ವೇಸಾಮಾನ್ಯವಾಗಿ ನಮಗೆ ಕಾಣುತ್ತಿದೆ. ಎಲ್ಲರಿಂದ ಆರಿಸಿ ಬಂದಂತಹ ಶಾಸಕರಿಗೆ ಕೆಲವು ಅಧಿಕಾರಗಳು ಇರಬೇಕು. ಜನರ ಬೇಡಿಕೆಗಳನ್ನು ಈಡೇರಿಸಲು ಕೆಲವು ಅವಕಾಶವನ್ನು ಮಾಡಿಕೊಟ್ಟಿಲ್ಲ. ಮಹಾರಾಷ್ಟ್ರದಲ್ಲಿ ಒಂದು ವರ್ಷಕ್ಕೆ ಒಬ್ಬ ಶಾಸಕರಿಗೆ ಕೆಲವು ಅಧಿಕಾರಗಳನ್ನು ಕೊಡುವ ಪದ್ಧತಿ ಇದೆ ಅವರು ಅದರಲ್ಲಿ ಅತ್ಯವಶ್ಯಕವಾಗಿರತಕ್ಕಂತಹ ಸಾರ್ವಜನಿಕ ಕಾಮಗಾರಿಗಳನ್ನು ಮಾಡಿಸಬಹುದು. ಒಂದು ವರ್ಷಕ್ಕೆ ೨೦ ಬೋರ್‌ವೆಲ್‌ಗಳನ್ನು ಹಾಕಿಸುವ ಬಗ್ಗೆ ಶಾಸಕರ ತೀರ್ಮಾನಕ್ಕೆ ಬಿಟ್ಟಿರತಕ್ಕಂಥಾದ್ದು ಅಲ್ಲಿ ಇದೆ. ಇಲ್ಲಿ ಸುಮ್ಮನೆ ಬಸವ ಬಿಡುವುದು ಎಂದು ಏನು ಹೇಳುತ್ತಾರೆ ಆ ರೀತಿಯಾಗಿದೆ. ಸುಮ್ಮನೆ ಓಡಾಡಿಕೊಂಡಿರುವುದು. ಈ ರೀತಿಯಾದರೆ ಸರಿಯಾಗುವುದಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿ ಶಾಸಕರಿಗೆ ಏನು ಅವಶ್ಯಕತೆ ಇದೆ, ಎಷ್ಟು ಜನರನ್ನು ಅವರು ಪ್ರತಿನಿಧಿಸುತ್ತಾರೆ ಅವರಿಗೆ ಏನು ಸೌಲಭ್ಯ ಬೇಕಾಗುತ್ತದೆ ಎಂಬ ಬಗ್ಗೆ ತಿದ್ದುಪಡಿ ಯನ್ನು ತರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ನನಗೆ ಅವಕಾಶ......

(ಗೊಂದಲ)

ಪ್ರೊ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ವಿಶೇಷವಾದಂತಹ ಚರ್ಚೆಗೆ ಈಗಾಗಲೇ ಸಮಾಧಾನಕರವಾದಂತಹ ಉತ್ತರವನ್ನು ಈಗಾಗಲೇ ಕೊಟ್ಟಿದ್ದೇನೆ. ಆದರೂ ಕೂಡ ಕೆಲವು ಸಂಶಯುವನ್ನು ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯವಶ್ಯಕವಾಗಿ ಬೇಕಾಗಿರ ತಕ್ಕಂತಹ ತಿದ್ದುಪಡಿ ಇದು. ಮಾನ್ಯ ಸಭೆ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್.—ಈ ತಿದ್ದುಪಡಿ ವಿಚಾರದಲ್ಲಿ ಅನೇಕ ಸದಸ್ಯರು ಅನಾವಶ್ಯಕವಾದಂತಹ ಆತಂಕಗಳನ್ನು ವ್ಯಕ್ತ ಮಾಡಿದ್ದಾರೆ. ಶಾಸಕರಾದಂತಹವರು, ಎಂ.ಎಲ್.ಸಿ. ಯಾಗಿರತಕ್ಕಂಹವರು ಅಧ್ಯಕ್ಷರಾಗಬೇಕೆನ್ನುವ, ಉಪಾಧ್ಯಕ್ಷರಾಗಬೇಕೆನ್ನುವ ಕಾರಣಕ್ಕೆ ಈ ತಿದ್ದುಪಡಿಯನ್ನು ತಂದಿದ್ದೀರಿ ಎನ್ನುವಂತಹ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಇದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಇಲ್ಲಿನ ಅಧಿನಿಯಮದ ೧೩೯ರ ಪ್ರಕಾರ ಇದರ ಬಗ್ಗೆ ಭಿನ್ನಾಭಿಪ್ರಾಯ, ಆತಂಕವನ್ನು ವ್ಯಕ್ತ ಮಾಡತಕ್ಕಂಥದ್ದಕ್ಕೆ ಕಾರಣವಿಲ್ಲ. Rule 139 says as follows.

> "Every Zilla Parishad shall consist of elected Members as determined under section 140".

ಯಾರು ಆಯ್ಕೆಯಾಗಿರತಕ್ಕಂತಹ ಸದಸ್ಯರಿದ್ದಾರೆ. ಅವರು ಮಾತ್ರ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಲಿಕ್ಕೆ ಅವಕಾಶ ಇದೆ. ಶಾಸಕರು, ಎಂ.ಎಲ್.ಸಿ. ಗಳಾಗಿರತಕ್ಕಂತಹವರು ಅಧ್ಯಕ್ಷ, ಉಪಾಧ್ಯಕ್ಷರಾಗಲಿಕ್ಕೆ ಇಲ್ಲಿ ಅವಕಾಶವಿಲ್ಲ. ನಿಯಮ ೧೩೯ 'ಬಿ' ನಲ್ಲಿ ಈ ರೀತಿ ಹೇಳಿದ್ದಾರೆ.

> "The Members of the State Legislative Assembly and the Legislative Council rererred to in Clasue (a) shall have the rights and be subject to the liabilities of the Members of the Zilla Parishad except the right to hold the Office of Adhyaksha or Upadhyaksha".

ಎಂದು ಆದ್ದರಿಂದ ಈ ಆತಂಕಕ್ಕೆ ಯಾವುದೇ ತರವಾಗಿರತಕ್ಕಂಥ ಬುನಾದಿಯೇನೂ ಇಲ್ಲ ತಾವು

೨-೦೦ ಪಿ. ಎಂ.

ಇದಕ್ಕಾಗಿ ಯೋಚನೆ ಮಾಡಬೇಕಾಂಥ ಅಗತ್ಯ ಇಲ್ಲ. ಸಾರ್ವಜನಿಕರಲ್ಲಿ ಅಥವಾ ಸನ್ಮಾನ್ಯ ಸದಸ್ಯರಲ್ಲಿ ಅಂಥ ಅಭಿಪ್ರಾಯ ಆತಂಕ ಇದ್ದರೆ ಅದನ್ನು ದಯಮಾಡಿ ತೆಗೆದುಹಾಕಬೇಕು ಎಂದು ಹೇಳಿ ತಮ್ಮ ಮೂಲಕವಾಗಿ ಈ ಸ್ಪಷ್ಟೀಕರಣವನ್ನು ಕೊಡುತ್ತಿದ್ದೇನೆ. ಈ ಗೊತ್ತುವಳಿ ಬಹಳ ಸೀಮಿತವಾಗಿ ತಕ್ಕಂಥದ್ದು. ಮಾತ್ರ ಇನ್ನು ಬೇರೆ ವಿಚಾರಗಳ ಬಗ್ಗೆಯೂ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಸಮಗ್ರವಾದಂಥ ತಿದ್ದುಪಡಿಯನ್ನು ತರಬೇಕಾಗಿದೆ. ಸಮಗ್ರವಾದಂಥ ತಿದ್ದುಪಡಿಯಲ್ಲಿ ಬಹಳ ಮುಖ್ಯವಾಗಿರತಕ್ಕಂಥ ಅಂಶಗಳು ಯಾವುವು ಎಂಬುದನ್ನು ಕಳೆದ ಅಧಿವೇಶದಲ್ಲಿ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡಿದರು, ಶ್ರೀಮಾನ್ ಬಸವಲಿಂಗಪ್ಪನವರೂ ಕೂಡಾ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಜನಾಂಗಕ್ಕೆ ನಾವು ನ್ಯಾಯವಾಗಿ ಕೊಡಬೇಕಾಗಿರತಕ್ಕಂಥ ಪ್ರಾತಿನಿಧ್ಯ ಅದರಲ್ಲಿ ಇಲ್ಲ. ಆ ಬಗ್ಗೆ ಕೂಡಾ ಸಮಗ್ರವಾದ ತಿದ್ದುಪಡಿಯನ್ನು ತರಬೇಕು. ಹಾಗೂ ಇದರ ಬಗ್ಗೆ ಇನ್ನು ಬೇರೆ ವಿಚಾರಗಳನ್ನು ಮಾನ್ಯ ಸದಸ್ಯರು ವ್ಯಕ್ತಮಾಡಿದ್ದಾರೆ, ಸಮಗ್ರವಾದ ತಿದ್ದುಪಡಿಯನ್ನು ತರಬೇಕಾಗಿದೆ, ಅದನ್ನು ಜೂನ್ ಅಧಿವೇಶನದಲ್ಲಿ ತರುತ್ತೇವೆ. ಇದರ ಬಗ್ಗೆ ಈಗಾಗಲೇ ನಾನು ಕಾನೂನು ಇಲಾಖೆಯ ಜೊತೆಯಲ್ಲಿ ಸಂಪರ್ಕ ಮಾಡಿದ್ದೇವೆ. ಮತ್ತು ನಮ್ಮ ಇಲಾಖೆಯ ಬಗ್ಗೆ ಕೂಡಾ ಮಾನ್ಯ ಸದಸ್ಯರುಗಳು ಕೊಟ್ಟಿರತಕ್ಕಂಥದ್ದರ ಸಲಹೆಗಳನ್ನು ಚರ್ಚೆ ಮಾಡಿದ್ದೇವೆ. ಸಮಗ್ರವಾದ ತಿದ್ದುಪಡಿಯನ್ನು ಜೂನ್ ಅಧಿವೇಶನದಲ್ಲಿ ತರುತ್ತೇವೆ, ಆದುದರಿಂದ

ಇದರ ಬಗ್ಗೆಯೂ ಯಾವುದೇ ತರವಾಗಿ ತಕ್ಕಂಥ ಆತಂಕವನ್ನು ಮಾನ್ಯ ಸದಸ್ಯರು ಇಟ್ಟುಕೊಳ್ಳಬೇಕಾಗಿಲ್ಲ. ಈಗಿನ ನಮ್ಮ ಅನುಭವಗಳ ಮೂಲಕವಾಗಿ ಯಾರಾರಿಗೆ ಯಾವುದುಯಾವುದು ಅಧಿಕಾರವನ್ನು ಕೊಡಬೇಕು ಎಂದು ಇದೆ, ಅದರಲ್ಲಿ ಬಹಳ ಜನ ಸದಸ್ಯರು ತ್ರೀವ್ರವಾಗಿರತಕ್ಕಂಥ ಅಲ್ಲಿ ಸದಸ್ಯರು ಆಗಿರತಕ್ಕಂಥವರಿಗೆ ಅವಮಾನ ಆಗುವಂಥ ರೀತಿಯಲ್ಲಿ ನಡೆದುಕೊಂಡಿದ್ದೀರಿ, ಕೈಯಲ್ಲಿ ಅಧಿಕಾರ ಇಲ್ಲ ಎಂದು ಹೇಳಿದ್ದಾರೆ. ಇದನ್ನೇ ತಾರ್ಕಿಕವಾಗಿ ಯೋಚನೆ ಮಾಡುವುದಾಗಿದ್ದರೆ ಬ್ರಿಟಿಷರೂ ಕೂಡಾ ಇಂಥ ಮಾತುಗಳನ್ನೇ ಮಾತನಾಡುತ್ತಿದ್ದರು. ಅಧಿಕಾರವನ್ನು ಏನಾದರೂ ಭಾರತ ದೇಶದ ಜನಗಳ ಕೈಯಲ್ಲಿ ಕೊಟ್ಟರೆ ನೂರಾರು ಭಾಷೆಗಳು, ಜಾತಿಗಳು ಈ ರೀತಿಯಾಗಿ ಅನಕ್ಷರಸ್ಥರುಗಳಿಂದ ತುಂಬಿರತಕ್ಕಂಥ ಈ ದೇಶದಲ್ಲಿ ಅಧಿಕಾರವನ್ನು ಅವರ ಕೈಯಲ್ಲಿ ಕೊಟ್ಟರೆ ನಾವು ವಿಫಲರಾಗಿಹೋಗುತ್ತದೆ. ಹೆಚ್ಚು ಹಣ ಖರ್ಚಾಗುತ್ತದೆ ಮತ್ತು ಅಭಿವೃದ್ಧಿ ಕೂಡಾ ಆಗುವುದಿಲ್ಲ, ವೇಬ ಮಾತುಗಳನ್ನೇ ಮಾತನಾಡುತ್ತಿದ್ದುದು ಉಂಟು. ಇಲ್ಲಿ ಡಿಸ್-ಕ್ವಾಲಿಫಿಕೇಷನ್ ಆಗುವುದಿಲ್ಲ. ಅದಕ್ಕಾಗಿ ಈ ವಿಷಯವನ್ನು ಹೇಳುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಅಲ್ಲಿ ಜಿಲ್ಲಾ ಮಟ್ಟದಲ್ಲಿ ಉಪಾಧ್ಯಕ್ಷರು ಏನಾದರೂ ತಪ್ಪು ಮಾಡಿದರೆ ಶಿಕ್ಷೆ ಮಾಡಲಿಕ್ಕೆ ಏನಾದರೂ, ಇಲ್ಲಿ ಅವಕಾಶವಿದೆಯೇ ?

ಶ್ರೀ ಎಂ. ಪಿ. ಪ್ರಕಾಶ್.—ಅದನ್ನೇ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಈ ರೀತಿಯಾಗಿ ಸಮಗ್ರವಾಗಿರತಕ್ಕಂಥ ತಿದ್ದುಪಡಿಗಳನ್ನು ತರಬೇಕು ಎಂದು ಏನು ಸೂಚನೆಯನ್ನು ಕೊಟ್ಟಿದ್ದೀರಿ, ಅದು ಕೂಡಾ ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿದೆ. ಕಾನೂನು ಇಲಾಖೆಗೆ ಕೂಡಾ ಅದನ್ನು ಕಳುಹಿಸಿಕೊಟ್ಟಿದ್ದೇವೆ. ಈ ತಿದ್ದುಪಡಿಯನ್ನು ಜೂನ್ ತಿಂಗಳಲ್ಲಿ ತರುತ್ತೇವೆ. ಆದರೆ ಅಧಿಕಾರದ ವಿಕೇಂದ್ರೀಕರಣ ಮಾಡಿಕೊಡತಕ್ಕಂಥ ಸಂದರ್ಭದಲ್ಲಿ ಅನಾವಶ್ಯಕವಾಗಿ ಗೊಂದಲಗಳು ಆಗುತ್ತವೆ. ಶ್ರೀ ಮಾನ್ ರತ್ನಾಕರ್‌ರವರು ಹೇಳಿದರು, ಏನೆಂದರೆ, ೨೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಿಕಾಗಿ ಮಹಾರಾಷ್ಟ್ರದಲ್ಲಿ ಅವಕಾಶಮಾಡಿ ಕೊಟ್ಟಿದ್ದಾರೆ ಎಂದು, ಮಹಾರಾಷ್ಟ್ರದಲ್ಲಿ ಇಂಥ ಪರಿಕಲ್ಪನೆ ಇರತಕ್ಕಂಥ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಯ ಕಾನೂನು ಇಲ್ಲ. ಆದುದರಿಂದ ಈ ರೀತಿಯಾದಂಥ ಅಧಿಕಾರವನ್ನು ಕೊಡಬೇಕು ಎಂದು ಬಯಸುವುದು ಕೂಡಾ ಸಹಜವಾದುದಲ್ಲ. ಈಗಿನ ಮಸೂದೆಗೆ ನಾವುಗಳೆಲ್ಲಾ ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಇದು ಇಡೀ ಭಾರತದೇಶದಲ್ಲಿಯೇ ಬಹಳ ಕ್ರಾಂತಿಕಾರಕವಾಗಿದೆ. ಈ ರೀತಿಯ ಒಂದು ಕಾನೂನನ್ನು ತಂದಾಗ, ಪ್ರಧಾನಮಂತ್ರಿಗಳೇ ಇಂಥ ಕಾನೂನನ್ನು ಬೇರೆ ರಾಜ್ಯಗಳಲ್ಲಿಯೂ ತರಬೇಕು ಎಂದು ಪ್ರಯತ್ನ ಮಾಡಿ ಇದೇ ಏಪ್ರಿಲ್ ತಿಂಗಳಲ್ಲಿ ಒಂದು ಮಂಡಲ ಪಂಚಾಯಿತಿಯ ಅಧಿವೇಶನವನ್ನು ನಡೆಸಬೇಕು ಎಂದು ಬಯಸಿದಾಗ ಮತ್ತೆ ನಾವು ಇದರಿಂದ ವಾಪಸ್ ಹೋಗಬೇಕೆಂದರೆ, ಅದು ವಿಗತಿಯಾಗಿರತಕ್ಕಂಥ ಹೆಜ್ಜೆಯಾಗುತ್ತದೆ. ಆದುದರಿಂದ ಸಮಗ್ರವಾದ ತಿದ್ದುಪಡಿಯನ್ನು ತರುತ್ತೇವೆ ಎನ್ನತಕ್ಕಂಥ ಅಭಿಪ್ರಾಯ ಏನು ಇದೆ, ಅದನ್ನು ತರುತ್ತೇವೆ. ಆದರೆ ಡಿಸ್-ಕ್ವಾಲಿಫಿಕೇಷನ್ ವಿಚಾರದಲ್ಲಿ ಏನು ತಮ್ಮ ಆತಂಕವನ್ನು ವ್ಯಕ್ತ ಮಾಡಿದ್ದೀರಿ...

ಶ್ರೀ ಜಿ. ಎಸ್. ಆಚಾರ್.—ತಾವು ೧೫೪ (೨)ನ್ನು ನೋಡಿ.

Sri MOHAMMED LAIKUDDIN.—sir, I want some clarifications.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಅದನ್ನು ಮಾಡಕೂಡದೆಂದು ಅಲ್ಲಿ ನಿರ್ಬಂಧ ಇತ್ತು.

ಒಬ್ಬ ಮಾನ್ಯ ಸದಸ್ಯರು. ಅಧ್ಯಕ್ಷರೇ, ತಾವು ಕ್ಲಾರಿಫಿಕೇಶನ್ ಕೇಳಲು ಅವಕಾಶವನ್ನು ಕೊಡಬೇಕು. ಇದಕ್ಕೆ ಅಂಥ ಅರ್ಜೆಂಟ್ ಆದರೂ ಏನು ?

(ಗೊಂದಲ)

ಡಾ॥ ಹೆಚ್. ಎಲ್. ತಿಮ್ಮೇಗೌಡ. ದಿವಂಗತ ಬಿ. ಎಲ್. ಗೌಡರವರು ಒಂದೆ ಪ್ರೆಸಿಡೆಂಟ' ಹುದ್ದೆಗೆ ಕಂಟೆಸ್ಟ್ ಮಾಡಿ ಗೆದ್ದರು, ಅದು ಹೈಕೋರ್ಟಿಗೆ ಹೋಯಿತು. ಹೈಕೋರ್ಟಿನಲ್ಲಿ ಏನು ಡಿಷನ್ ಆಗಿದೆ ಎಂದು ದಯವಿಟ್ಟು ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಕೇಳಿ. When the Act rovides for a membership to an MLA giving power to participate nd vote it cannt take away his right to be the President of the aluk Board ಇವತ್ತಿನ ದಿವಸ ಹೈಕೋರ್ಟಿನಲ್ಲಿ ಡಿಸಿಷನನ್ನು ಕೊಟ್ಟಿದ್ದಾರೆ. ಅವರ ಪ್ರಕಾರ

ತಾವು ಏನು ಓದಿದ್ದೀರಿ, ಅದನ್ನು ನಾವು ಸಹ ಓದಿದ್ದೇವೆ. ಯಾರಾದರೂ ಎಂ. ಎಲ್. ಎ. ಗಳು ಪ್ರೆಸಿಡೆಂಟ್ ಆಗಬೇಕು ಎಂದು ಹೇಳಿ ಪ್ರಯತ್ನ ಪಟ್ಟಾಗ ಕಾನೂನಿನ ಪ್ರಕಾರ ಅದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ ಹೈಕೋರ್ಟ್‌ನಲ್ಲಿ ಇದರ ಬಗ್ಗೆ ತೀರ್ಮಾನವಾಗಿದೆ. Same wording was there in the Taluk Board Act.

ಅಧ್ಯಕ್ಷರು. – ಆಯಿತು.

ಶ್ರೀ ಎಂ. ಪಿ. ಪ್ರಕಾಶ್. ನೇರವಾದಂಥ ಪದಗಳೇನೂ ಅಲ್ಲಿ ಇಲ್ಲ. ಆ ಕಾಲದ ತಾಲ್ಲೂಕು ಅಭಿವೃದ್ಧಿ ಪಂಚಾಯಿತಿ, ಮಂಡಲ ಪಂಚಾಯಿತಿ ಕಾನೂನಿನಲ್ಲಿ ಇದು ಇರುವಂಥದ್ದು. ಆ ಕಾನೂನಿಗೂ ಮತ್ತು ಈ ಕಾನೂನಿಗೂ ಬಹಳ ವ್ಯತ್ಯಾಸ ಇದೆ. ಇದನ್ನು ತಮ್ಮ ಅವಗಾಹನೆಗೆ ತರುತ್ತೇನೆ.

> "Members of the State Legislative Assembly and Legislative Council referred to in clause (a) shall have the rights and be subject to the liabilities of the Zilla Parishad except the right to hold the office of Adhyaksha or Upadhakshya."

(ಗೊಂದಲ)

Sri M. P. PRAKASH.—Except to hold the office of profit ಎಂದು ಇರುವುದರಿಂದ ಇವರು ಕಾನೂನಿನ ಒಂದು ನಿಬಂಧನೆ ಮೂಲಕವಾಗಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗುತ್ತಾರೆ. ಅವರು ತೆಗೆದುಕೊಳ್ಳತಕ್ಕ ಸಂಬಳ ಕೂಡ ಆಫೀಸ್ ಆಫ್ ದಿ ಪ್ರಾಫೀಟ್ ಎಂದು ಹೇಳತಕ್ಕ ಅವಕಾಶ ಇದೆ.

ಡಾ॥ ಹೆಚ್. ಎಲ್. ತಿಮ್ಮೇಗೌಡ. – ಈಗ ಇದು ಡಿಪಾರ್ಟ್‌ಮೆಂಟ್‌ನಲ್ಲಿದೆ...

ಶ್ರೀ ಎಂ. ಪಿ ಪ್ರಕಾಶ್. ಪ್ರಫೀಟ್ ಎಂದು ಹೇಳತಕ್ಕ ಅವಕಾಶ ಇರುವುದರಿಂದ ಇಲ್ಲಿ ತಿದ್ದುಪಡಿಯನ್ನು ತಂದಿದ್ದೇವೆ.

(ಗೊಂದಲ)

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: "೧೯೮೯ನೇ ಇಸವಿಯ ಕರ್ನಾಟಕ ವಿಧಾನಮಂಡಲ (ಅನರ್ಹತಾ ಪ್ರತಿಬಂಧ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ೨ ಮತ್ತು ೩

ಅಧ್ಯಕ್ಷರು.—"ಖಂಡ ೨ ಮತ್ತು ೩ ಈ ವಿಧೇಯಕದ ಅಂಗವಾಗಿರುತ್ತವೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ಎರಡು ಮತ್ತು ಮೂರು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ. –

ಅಧ್ಯಕ್ಷರು. – ಪ್ರಸ್ತಾವ ಏನೆಂದರೆ: "ಮೊದಲನೇ ಖಂಡ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ ಇತ್ಯಾದಿ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವ ಅಂಗೀಕಾರ

ಪ್ರೊ॥ ಎ. ಲಕ್ಷ್ಮೀಸಾಗರ್.—(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆಯ ಸಚಿವರು).—ಮಾನ್ಯ ಅಧ್ಯಕ್ಷರೇ, "೧೯೮೯ನೇ ಇಸವಿಯ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ಪ್ರತಿಬಂಧ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು. ಪ್ರಸ್ತಾವ ಏನೆಂದರೆ: '೧೯೮೯ನೇಯ ಕರ್ನಾಟಕ ವಿಧಾನ ಮಂಡಲ (ಅನರ್ಹತಾ ಪ್ರತಿಬಂಧ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗಿಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಎ. ಪಿ. ಎಂ. ಸಿ. ಗೆ ನಡೆಯಲಿರುವ ಚುನಾವಣೆಗಳನ್ನು ಮುಂದೂಡುವ ಬಗ್ಗೆ

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರೇ. ತಾವು ಮುಂದಿನ ಬಿಲ್‌ನ್ನು ತೆಗೆದು ಕೊಳ್ಳುವುದಕ್ಕಿಂತ ಮೊದಲು ಎ. ಪಿ. ಎಂ. ಸಿ. ಎಲೆಕ್ಷನ್ ಸಂಬಂಧದಲ್ಲಿ ಕರ್ನಾಟಕ ರಾಜ್ಯಾದಂತ ಈ ತಿಂಗಳ ಕೊನೆಯಾಳಗಾಗಿ ಅಂದರೆ ದಿನಾಂಕ ೨೮, ೨೯, ೩೦ರೊಳಗೆ ನಾಮಿನೇಷನ್ ಪೇಪರ್ ಫೈಲ್ ಮಾಡಬೇಕಾಗಿದೆ. ಆ ವಿಚಾರದಲ್ಲಿ ಚುನಾವಣೆಯನ್ನು ಮುಂದಕ್ಕೆ ಹಾಕತಕ್ಕಂಥಹದರ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಶ್ರೀ ಮಾನ್ ರಾಚಯ್ಯನವರು ನೋಟಿಫಿಕೇಶನ್ ಓದಿದರೆಂದು ಡೆಕ್ಕನ್ ಹೆರಾಲ್ಡ್‌ನಲ್ಲಿ ಹಾಗೂ ಇತರೇ ಪತ್ರಿಕೆಗಳಲ್ಲಿ ಬಂದಿದೆ. ಆ ಸದನದಲ್ಲಿ ನೋಟಿಫಿಕೇಶನ್ ಇಶ್ಯೂ ಮಾಡಿದ್ದಾರೆ. when the House is in session. ತಕ್ಷಣ ಇಲ್ಲೂ ಕೂಡ ಅದನ್ನು ಹೇಳಬೇಕಾಗುತ್ತದೆ. Otherwise it amounts to breach of privilege of this House. ಇವೊತ್ತು ಈ ಬಗ್ಗೆ ನಾವು ಪ್ರಿವಿಲೇಜ್ ಇಶ್ಯೂ ತೆಗೆದುಕೊಳ್ಳಬೇಕೆಂಬ ಉದ್ದೇಶಧಿಂದ ಮಾತನಾಡುತ್ತಿಲ್ಲ. ಆದರೆ ಸದನದ ಗೌರವದ ದೃಷ್ಟಿಯಿಂದ ಮಾನ್ಯ ಸದಸ್ಯರಿಗೆ ಈ ವಿಚಾರ ಗೊತ್ತಾಗಬೇಕು ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಈ ಬಗ್ಗೆ ಸರ್ಕಾರದ ತೀರ್ಮಾನ ಏನಿದೆ ಎಂಬುದು ನಮಗೆ ಗೊತ್ತಾಗಬೇಕು. ನೀವು ಎ ಪಿ ಎಂ ಸಿ ಎಲೆಕ್ಷನ್ಸ್ ಮುಂದಕ್ಕೆ ಹಾಕಿರುವ ವಿಚಾರದಲ್ಲಿ...

ಅಧ್ಯಕ್ಷರು. - ಮುಂದೆ ಹಾಕಲಿಲ್ಲ....

ಶ್ರೀ ಎಸ್ ಬಂಗಾರಪ್ಪ.—ಮುಂದೆ ಹಾಕಿದ್ದಾರೆ. ಇಲ್ಲಿ ಕುಳಿತುಕೊಂಡು...

ಅಧ್ಯಕ್ಷರು.— ತಾವು ಹೇಳುವುದು ಕರೆಕ್ಟ್ ಇದೆ. ನಾನು ಕೇಳುತ್ತೇನೆ.

Sri S. BANGARAPPA.—The Hon'ble Minister has read out a notification alleged to have been issued by the Government. Why not in this House ?

ಅಧ್ಯಕ್ಷರು. ಆ ಹೌಸ್‌ನಲ್ಲಿ ಎ. ಪಿ. ಎಂ. ಸಿ. ಎಲೆಕ್ಷನ್ ಮುಂದಕ್ಕೆ ಹಾಕಿದ್ದೇವೆಂದು ನೋಟಿಫಿಕೇಷನ್ ಓದಿದರು, ಅದನ್ನು ಇಲ್ಲಿ ಯಾರೂ ಹೇಳಲಿಲ್ಲ ಎಂದು ಅವರು ಹೇಳುತ್ತಿರುವುದು...

ಪ್ರೊ॥ ಎ. ಲಕ್ಷ್ಮೀಸಾಗರ್.—ಮೇಲ್ಮನೆಯಲ್ಲಿ ಪ್ರಕಟವಾಗಿದ್ದರೆ ವಿಷಯವನ್ನು ಇಲ್ಲೂ ಪ್ರಕಟ ಮಾಡಬೇಕಾಗುತ್ತದೆ. ಅದನ್ನು ವಿಚಾರಿಸಬೇಕು.

ಅಧ್ಯಕ್ಷರು.—ಅಲಕ್ಷ್ಯ ಮಾಡಬೇಡಿ ಎಂದು ಹೇಳುತ್ತಾರೆ,

ಶ್ರೀ ಎಸ್. ಬಂಗಾರಪ್ಪ.—ಅಲಕ್ಷ್ಯ ಅಲ್ಲ, ಸದನದ ಘನತೆ ಗೌರವದ ಪ್ರಶ್ನೆ.